# ಉನ್ನತ ಶಿಕ್ಷಣ ಇಲಾಖೆ
# ಹಾಗೂ
# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

# ಕನ್ನಡ ಪಠ್ಯರಚನಾ ತಜ್ಞ ಸಮಿತಿಯ ವರದಿ

## (ರಾಷ್ಟ್ರೀಯ ಶಿಕ್ಷಣ ನೀತಿಯ ೨೦೨೦ ಅನ್ವಯ)
## 3 ಮತ್ತು 4ನೇ ಸೇಮಿಸ್ಟರ್

ಅಧ್ಯಕ್ಷರು

**ಡಾ. ಸ.ಚಿ. ರಮೇಶ**

ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ

**ಡಾ.ವಿಜಯಕುಮಾರಿ ಎಸ್. ಕರಿಕಲ್,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಸಿ. ನಾಗಭೂಷಣ,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಎಚ್. ಟಿ. ಪೋತೆ,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ

**ಡಾ. ಮಹೇಶ್ ಚಿಂತಾಮಣಿ,** ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕೆ.ಎಸ್.ಡಬ್ಲ್ಯೂ. ವಿಶ್ವವಿದ್ಯಾಲಯ, ವಿಜಯಪುರ

**ಡಾ. ಎಸ್. ಎಂ. ಗಂಗಾಧರಯ್ಯ,** ಪ್ರಾಧ್ಯಾಪಕರು,
ಕನ್ನಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಡಾ. ಲಿಂಗರಾಜಯ್ಯ,** ಪ್ರಾಧ್ಯಾಪಕರು,
ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು

**ಡಾ. ಎಚ್. ಎಸ್. ರಘುನಾಥ್,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ

**ಡಾ. ಎಚ್. ಎನ್. ಚನ್ನಪ್ಪಗೋಳ,** ಸಹ ಪ್ರಾಧ್ಯಾಪಕರು,
ಕೆ.ಎಲ್.ಇ. ಲಿಂಗರಾಜ ಕಾಲೇಜು, ಬೆಳಗಾವಿ.

**ಡಾ. ಕೆ. ಮಾಧವ ಪೆರಾಜೆ,** ಪ್ರಾಧ್ಯಾಪಕರು,
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಕೆ. ರವೀಂದ್ರನಾಥ,** ಪ್ರಾಧ್ಯಾಪಕರು,
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಮಲ್ಲಿಕಾರ್ಜುನ ಕೆ.,** ಸಹ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

**ಡಾ. ಹೆಚ್. ಜಿ. ಶ್ರೀಧರ,** ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ, ವಿವೇಕಾನಂದ ಕಾಲೇಜು, ಪುತ್ತೂರು

**ಡಾ. ಧನಂಜಯ ಕುಂಬಳೆ,** ಸಹ ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು

**ಡಾ. ಟಿ. ಎಂ. ಭಾಸ್ಕರ್,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಕೆ. ಅಭಯ್‌ಕುಮಾರ್,** ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ಡಾ. ಪ್ರಶಾಂತ್ ನಾಯಕ ಜಿ.,** ಪ್ರಾಧ್ಯಾಪಕರು,
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಡಿ. ವಿ. ಪರಮಶಿವಮೂರ್ತಿ,** ಪ್ರಾಧ್ಯಾಪಕರು,
ತುಮಕೂರು ವಿಶ್ವವಿದ್ಯಾಲಯ, ತುಮಕೂರು

**ಡಾ. ಆಶಾದೇವಿ ಎಂ.ಎಸ್.,** ಪ್ರಾಧ್ಯಾಪಕರು,
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಎಂ. ಡಿ. ಒಕ್ಕುಂದ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾಂಡೇಲಿ

**ಡಾ. ಶೈಲಜಾ ಕೊಪ್ಪರ್,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕಲಬುರ್ಗಿ

**ಡಾ. ಮಾಧವ,** ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು

**ಡಾ. ಎನ್. ಆರ್. ಲಲಿತಾಂಬ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು

**ಡಾ. ಕೆ. ಸಿ. ಶಿವಾರೆಡ್ಡಿ,** ಪ್ರಾಧ್ಯಾಪಕರು,
ನಿರ್ದೇಶಕರು ಕನ್ನಡ ವಿ.ವಿ. ಪ್ರಾದೇಶಿಕ ಕಛೇರಿ, ಬೆಂಗಳೂರು

**ಡಾ. ಎನ್. ಶೋಭಾರಾಣಿ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

**ಡಾ. ಎಚ್. ಗೀತಾ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ, ಮೈಸೂರು

**ಡಾ. ಲಕ್ಷ್ಮೀಕಾಂತ ಪಂಚಾಳ,** (ವಿಶೇಷ ಆಮಂತ್ರಿತ ಸದಸ್ಯರು,)
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಾಗಲಕೋಟೆ

## ಸದಸ್ಯ ಸಂಚಾಲಕರು

**ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ,**
ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

**ಶ್ರೀಮತಿ. ರಜನಿ ಬಿ.,**
ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಕರ್ನಾಟಕ ಸರ್ಕಾರ

**ಉನ್ನತ ಶಿಕ್ಷಣ ಇಲಾಖೆ**

**ಹಾಗೂ**

**ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್**

# ಕನ್ನಡ ಪಠ್ಯರಚನಾ ತಜ್ಞಸಮಿತಿಯ ವರದಿ

**(ರಾಷ್ಟ್ರೀಯ ಶಿಕ್ಷಣ ನೀತಿಯ 2020 ಅನ್ವಯ)**

**3 ಮತ್ತು 4ನೇ ಸೇಮಿಸ್ಟರ್**

# ವಿಶ್ವದೊಳ್ನುಡಿಯಾಗಿ ಕನ್ನಡವು ಕನ್ನಡವ ಕನ್ನಡಿಸುತಿರಬೇಕು

–ವರಕವಿ ದ.ರಾ. ಬೇಂದ್ರೆ

## ಅಧ್ಯಕ್ಷರು

# ಡಾ. ಸ.ಚಿ. ರಮೇಶ

ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ

# ಸದಸ್ಯರು

**ಡಾ.ವಿಜಯಕುಮಾರಿ ಎಸ್. ಕರಿಕಲ್,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಸಿ. ನಾಗಭೂಷಣ,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಎಚ್. ಟಿ. ಪೋತೆ,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ

**ಡಾ. ಮಹೇಶ್ ಚಿಂತಾಮಣಿ,** ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕೆ.ಎಸ್.ಡಬ್ಲ್ಯೂ. ವಿಶ್ವವಿದ್ಯಾಲಯ, ವಿಜಯಪುರ

**ಡಾ. ಎಸ್. ಎಂ. ಗಂಗಾಧರಯ್ಯ,** ಪ್ರಾಧ್ಯಾಪಕರು,
ಕನ್ನಡ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಡಾ. ಲಿಂಗರಾಜಯ್ಯ,** ಪ್ರಾಧ್ಯಾಪಕರು,
ವಿವೇಕಾನಂದ ಪದವಿ ಕಾಲೇಜು, ಬೆಂಗಳೂರು

**ಡಾ. ಎಚ್. ಎಸ್. ರಘುನಾಥ್,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಗರ

**ಡಾ. ಎಚ್. ಎನ್. ಚನ್ನಪ್ಪಗೋಳ,** ಸಹ ಪ್ರಾಧ್ಯಾಪಕರು,
ಕೆ.ಎಲ್.ಇ. ಲಿಂಗರಾಜ ಕಾಲೇಜು, ಬೆಳಗಾವಿ.

**ಡಾ. ಕೆ. ಮಾಧವ ಪೆರಾಜೆ,** ಪ್ರಾಧ್ಯಾಪಕರು,
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಕೆ. ರವೀಂದ್ರನಾಥ,** ಪ್ರಾಧ್ಯಾಪಕರು,
ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಮಲ್ಲಿಕಾರ್ಜುನ ಕೆ.,** ಸಹ ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ

**ಡಾ. ಹೆಚ್. ಜಿ. ಶ್ರೀಧರ,** ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ, ವಿವೇಕಾನಂದ ಕಾಲೇಜು, ಪುತ್ತೂರು

**ಡಾ. ಧನಂಜಯ ಕುಂಬಳೆ,** ಸಹ ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು

**ಡಾ. ಟಿ. ಎಂ. ಭಾಸ್ಕರ್,** ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಡಾ. ಕೆ. ಅಭಯ್‌ಕುಮಾರ್,** ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

**ಡಾ. ಪ್ರಶಾಂತ್ ನಾಯಕ ಜಿ.,** ಪ್ರಾಧ್ಯಾಪಕರು,
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಡಿ. ವಿ. ಪರಮಶಿವಮೂರ್ತಿ,** ಪ್ರಾಧ್ಯಾಪಕರು,
ತುಮಕೂರು ವಿಶ್ವವಿದ್ಯಾಲಯ, ತುಮಕೂರು

**ಡಾ. ಆಶಾದೇವಿ ಎಂ.ಎಸ್.,** ಪ್ರಾಧ್ಯಾಪಕರು,
ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಎಂ. ಡಿ. ಒಕ್ಕುಂದ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾಂಡೇಲಿ

**ಡಾ. ಶೈಲಜಾ ಕೊಪ್ಪರ್,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕಲಬುರ್ಗಿ

**ಡಾ. ಮಾಧವ,** ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾಲಯ ಕಾಲೇಜು, ಮಂಗಳೂರು

**ಡಾ. ಎನ್. ಆರ್. ಲಲಿತಾಂಬ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು

**ಡಾ. ಕೆ. ಸಿ. ಶಿವಾರೆಡ್ಡಿ,** ಪ್ರಾಧ್ಯಾಪಕರು,
ನಿರ್ದೇಕರು ಕನ್ನಡ ವಿ.ವಿ. ಪ್ರಾದೇಶಿಕ ಕಛೇರಿ, ಬೆಂಗಳೂರು

**ಡಾ. ಎನ್. ಶೋಭಾರಾಣಿ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

**ಡಾ. ಎಚ್. ಗೀತಾ,** ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ವಿಜಯನಗರ, ಮೈಸೂರು

**ಡಾ. ಲಕ್ಷ್ಮೀಕಾಂತ ಪಂಚಾಳ,** (ವಿಶೇಷ ಆಮಂತ್ರಿತ ಸದಸ್ಯರು,)
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಾಗಲಕೋಟೆ

## ಸದಸ್ಯ ಸಂಚಾಲಕರು

**ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ,**
ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

**ಶ್ರೀಮತಿ. ರಜನಿ ಬಿ.,**
ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

# ಅಧ್ಯಕ್ಷರ ಮಾತು

ಭಾರತ ಸರ್ಕಾರದ ೨೦೨೦ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಫಲಿತ ಮತ್ತು ಸಾಧನೆಗಳ ಸಮತೋಲನಕ್ಕೆ ಮಹತ್ವ ನೀಡಲಾಗಿದೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು, ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ ಪೂರಕ ಸಂಬಂಧ ಇರಬೇಕೆಂಬುದು ಆದರ ಮುಖ್ಯ ಆಶಯವಾಗಿರುವುದು ವಿಶಿಷ್ಟ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಒತ್ತುಕೊಟ್ಟಿರುವುದು ಮಹತ್ವದ ವಿಷಯವಾಗಿದೆ. ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಭಾಷೆಗಳು ವಹಿಸುವ ನಿರ್ಣಾಯಕವಾದ ಪಾತ್ರವನ್ನು ಹೊಸ ಶಿಕ್ಷಣ ನೀತಿಯು ಒಪ್ಪಿದೆ.

ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರಿಯಲು ಎಲ್ಲ ಬಗೆಯ ತೀರ್ಮಾನಗಳಲ್ಲಿ ಪೂರ್ಣ ಸ್ವಾತಂತ್ರ್ಯ, ಸಮಾನತೆ ಮತ್ತು ಸಮಾವರ್ತನೆ (ಇನ್‌ಕ್ಲೂಸಿವ್) ಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತ ಈ ಬಗೆಯ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸೇರಿದಂತೆ ಮಹಾವಿದ್ಯಾಲಯಗಳು ಪಠ್ಯಕ್ರಮ ಅಧ್ಯಯನ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಹೊಸತನವನ್ನು ಅಳವಡಿಸಲು ಸ್ವಾತಂತ್ರ್ಯವನ್ನು ನೀಡಲಾಗಿದೆ.

ಸಂಪರ್ಕ ಮಾಧ್ಯಮದ ಜೊತೆಗೆ ಸಂಸ್ಕೃತಿ ಮತ್ತು ಮೌಲ್ಯಗಳನ್ನು ನಾಲ್ಕು ವರ್ಷದ ಬಹುಶಿಸ್ತೀಯ ಪದವಿ ಕೋರ್ಸುಗಳಲ್ಲಿ ಬೆಳೆಸುವುದು ಭಾಷಾ ಕಲಿಕೆಯ ಉದ್ದೇಶವಾಗಿದೆ. ಅಲ್ಲದೆ ಭಾಷೆ, ಸಾಹಿತ್ಯ ಮತ್ತು ಭಾಷಾ ಕಲಿಕೆ ಶಿಕ್ಷಣದ ಪ್ರಧಾನ ಕಾಳಜಿಯಾಗಿದೆ. ಕಲಿಕೆಯ ಮಾಧ್ಯಮದ ಜೊತೆಗೆ ವೈಯಕ್ತಿಕ, ಸಾಮಾಜಿಕ, ಆಡಳಿತಾತ್ಮಕ, ಔದ್ಯೋಗಿಕ, ವಾಣಿಜ್ಯ ವ್ಯವಹಾರ ನಿರ್ವಹಣೆಗಳ ಮೇಲೆ ಮಹತ್ವವನ್ನು ನೀಡುವುದಾಗಿದೆ. ಇದನ್ನು ಸಾಂದ್ರವಾಗಿ ಮತ್ತು ಹಿತವಾಗಿ ಅಭಿವ್ಯಕ್ತಿಸಬೇಕಾಗಿದೆ. ಸಂವಹನ ಕೌಶಲ್ಯದ ಮೂಲಕ ಅತಿ ಮಹತ್ವದ ಎಲ್ಲ ಬಗೆಯ ಜ್ಞಾನ ತಿಳುವಳಿಕೆ ಹೆಚ್ಚಿಸುವುದರ ಜೊತೆಗೆ ಉಳಿದೆಲ್ಲ ಜ್ಞಾನ ಶಿಸ್ತುಗಳನ್ನು ಜೋಡಿಸುವುದಾಗಿದೆ.

ದೇಶದಲ್ಲಿಯೇ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಮೊಟ್ಟಮೊದಲು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಿದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಸಿ. ಎನ್. ಅಶ್ವಥ್ ನಾರಾಯಣ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ಅವಿರತ ಶ್ರಮವಹಿಸಿದ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರು ಮತ್ತು ವಿಶ್ರಾಂತ ಕುಲಪತಿಗಳಾದ ಡಾ.ಬಿ.ತಿಮ್ಮೇಗೌಡ ಅವರಿಗೆ, ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಗೋಪಾಲಕೃಷ್ಣ ಜೋಶಿ ಅವರಿಗೆ ಕೃತಜ್ಞತೆಗಳು. ಕನ್ನಡ ವಿಷಯ ಪಠ್ಯ ರಚನಾ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾದ ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ, ಶ್ರೀಮತಿ. ರಜನಿ ಬಿ. ಅವರಿಗೆ, ಪಠ್ಯ

ರಚನಾ ಸಮಿತಿಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಎಲ್ಲ ಸದಸ್ಯರುಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕನ್ನಡ ಪಠ್ಯಕ್ರಮ ರಚನಾ ವರದಿಯನ್ನು ಸಿದ್ಧಪಡಿಸಲು ಸಕ್ರಿಯವಾಗಿ ಸಹಕರಿಸಿದ ಸಮಿತಿ ಸದಸ್ಯರೆಲ್ಲರಿಗೂ ಹಾಗೂ ವಿಶೇಷ ಆಹ್ವಾನಿತ ಸದಸ್ಯರೆಲ್ಲರಿಗೂ ಕೃತಜ್ಞತೆಗಳು.

**ಡಾ. ಸ. ಚಿ. ರಮೇಶ**
ಅಧ್ಯಕ್ಷರು
ಕನ್ನಡ ಪಠ್ಯ ರಚನಾ ಸಮಿತಿ
ಮತ್ತು
ಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

# ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ರ ಆಶಯಗಳು

ಭಾರತ ಸರ್ಕಾರವು ೨೦೨೦ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ೨೦೨೧ ರಿಂದ ಜಾರಿಗೆ ತಂದಿದೆ. ಕರ್ನಾಟಕವು ಇದನ್ನು ಅನುಷ್ಠಾನಗೊಳಿಸುತ್ತಿರುವ ಮೊದಲ ರಾಜ್ಯ ಎನ್ನುವ ಹೆಗ್ಗಳಿಕೆ ಪಡೆದಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಹಲವು ಹೊಸತನಗಳಿಂದ ಕೂಡಿದೆ. ಬದಲಾಗುತ್ತಿರುವ ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ ವಿದ್ಯಮಾನಗಳಿಗೆ ಅನುಗುಣವಾದ ಶಿಕ್ಷಣ ಮಾದರಿಯನ್ನು ರೂಪಿಸುವುದು ಇದರ ಮೂಲ ಉದ್ದೇಶವಾಗಿದೆ. ಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕಿಂತ ಭಿನ್ನವಾದ ಶಿಕ್ಷಣ ನೀತಿ ಇದಾಗಿದೆ. ವಿದ್ಯಾರ್ಥಿಗಳನ್ನು ಸಮಕಾಲೀನ ಸವಾಲುಗಳನ್ನು ಎದುರಿಸಲು ಬೇಕಾದ ಸದೃಢ ವ್ಯಕ್ತಿತ್ವಗಳಾಗಿ ರೂಪಿಸುವ ಆಶಯ ಇಲ್ಲಿದೆ. ಕಲಿಕೆ ಮತ್ತು ಫಲಿತಗಳ ನಡುವೆ ಸಮತೋಲನವನ್ನು ಸಾಧಿಸುವುದಕ್ಕೆ ಹೊಸ ಶಿಕ್ಷಣ ನೀತಿಯಲ್ಲಿ ಮಹತ್ವ ನೀಡಲಾಗಿದೆ.

ಈ ತನಕದ ವರ್ಗೀಕೃತ ಶಿಕ್ಷಣ ಕ್ರಮದ ಜಾಗದಲ್ಲಿ 'ಒಳಗೊಳ್ಳುವ' (Inclusive) ವಿಧಾನವನ್ನು ಅನುಸರಿಸಲಾಗಿದೆ. ಅಂದರೆ ಇಲ್ಲಿಯವರೆಗೆ ಸಮಾನಾಂತರವಾಗಿದ್ದ ಶಿಕ್ಷಣ ಶಿಸ್ತುಗಳು ಈಗ ಪರಸ್ಪರ ಪೂರಕವಾಗಿವೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳು ಈ ಶಿಕ್ಷಣ ನೀತಿಯಲ್ಲಿ ಒಂದೇ ವಿಶಾಲ ಭಿತ್ತಿಯಲ್ಲಿ ಕಾಣಿಸಿಕೊಂಡಿವೆ. ಇದು ಹೊಸ ಶಿಕ್ಷಣ ನೀತಿಯ ಮುಖ್ಯ ಆಶಯವಾಗಿರುವುದು ವಿಶಿಷ್ಟವಾದ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಹೇಳಿರುವುದು ಮಹತ್ವದ ಮತ್ತು ಸಮಕಾಲೀನ ಸವಾಲನ್ನು ಎದುರಿಸುವ ವಿಧಾನವೂ ಆಗಿದೆ. ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರೆಯಲು ಎಲ್ಲ ಬಗೆಯ ಅವಕಾಶಗಳನ್ನು ಮುಕ್ತವಾಗಿರಿಸಲಾಗಿದೆ. ಹೀಗೆ ಮಾಡುವುದರ ಮೂಲಕ ಶಿಕ್ಷಣದ ಪ್ರತಿ ಹಂತದಲ್ಲೂ ಹೊರಬರುವ ಅವಕಾಶವನ್ನು ಕೊಡುವುದರ ಮೂಲಕ ಅದು ತನ್ನಷ್ಟಕ್ಕೆ ತಾನು ಸ್ವತಂತ್ರ ಹಾಗೂ ಪೂರ್ಣ ಕೋರ್ಸ್ ಆಗಿರುವಂತೆ ರೂಪಿಸಲಾಗಿದೆ.

ಈ ಎಲ್ಲ ಆಶಯಗಳನ್ನು ಸಾಕಾರಗೊಳಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸೇರಿದಂತೆ ಮಹಾವಿದ್ಯಾಲಯಗಳು ಪಠ್ಯಕ್ರಮ, ಅಧ್ಯಯನ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಹೊಸತನವನ್ನು ಅಳವಡಿಸಲು, ಅವಕಾಶ ನೀಡಿರುವುದು ಸ್ವಾಗತಾರ್ಹವಾಗಿದೆ.

ಜಾಗತೀಕರಣ ಮತ್ತು ಮಾರುಕಟ್ಟೆ ಆರ್ಥಿಕ ನೀತಿಗಳಿಂದಾಗಿ ದೇಶಿಯ ಭಾಷೆಗಳು ಹಿನ್ನಡೆ ಅನುಭವಿಸುತ್ತಿರುವುದರಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಅನ್ಯ ಭಾಷೆಗಳ ಅತಿಯಾದ ಅವಲಂಬನೆಯಿಂದ ತಪ್ಪಿಸಿ ಪ್ರಾದೇಶಿಕ ಭಾಷೆಗಳ ಮಾಧ್ಯಮದ ಮೂಲಕ ಕಲಿಸುವುದಕ್ಕೆ ಒತ್ತು ನೀಡುವುದಕ್ಕೆ ಆದ್ಯತೆ ನೀಡುತ್ತದೆ.

ಕಲೆ, ವಿಜ್ಞಾನ, ವಾಣಿಜ್ಯ ಮಾನವಿಕ, ಶಿಕ್ಷಣ, ಕಾನೂನು ಆಯಾ ಜ್ಞಾನ ಶಿಸ್ತುಗಳಲ್ಲಿ ವಿದ್ಯಾರ್ಥಿಗಳು ಜ್ಞಾನ ಪಡೆಯುವುದು ಸರಿಯಷ್ಟೇ ಆಯಾ ಕ್ಷೇತ್ರದ ಜ್ಞಾನ ಶಿಸ್ತುಗಳ ಜ್ಞಾನವು ಸಾಕ್ಷಾತ್ಕಾರಗೊಳ್ಳುವುದು ಭಾಷೆ ಮತ್ತು ಸಾಹಿತ್ಯದಿಂದ ಮಾತ್ರ ಸಮಾಜದಲ್ಲಿ ಮನುಷ್ಯ ಉತ್ತಮ ನಾಗರಿಕನಾಗಿ ಬದುಕಲು, ಅಗತ್ಯವಾದ ಸಂವೇದನೆಯನ್ನು ಭಾಷೆ ಮತ್ತು ಸಾಹಿತ್ಯ ರೂಪಿಸುತ್ತವೆ. ಭಾಷೆ ಕೇವಲ ಮಾಧ್ಯಮವಾಗಿರದೇ ಅದೊಂದು ಸಂಸ್ಕೃತಿಯಾಗಿರುತ್ತದೆ.

ಬಿ.ಎ., ಬಿ.ಎಸ್.ಸಿ., ಬಿ.ಕಾಂ., ಬಿ.ಬಿ.ಎ, ಬಿ.ಬಿ.ಎಂ, ಬಿ.ಸಿ.ಎ., ಭಾಷಾ ವಿಜ್ಞಾನ ಮುಂತಾದ ಪದವಿ ಮತ್ತು ಸ್ನಾತಕೋತ್ತರ ಡಿಪ್ಲೊಮಾ ಕೋರ್ಸುಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಭಾಷೆ ಮತ್ತು ಸಾಹಿತ್ಯದ ಬೋಧನೆ ಮಾಡುವಾಗ ವಿಷಯಾಧಾರಿತ ಪಠ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.

ಆಯಾ ಕೋರ್ಸುಗಳಿಗೆ ಅನುಗುಣವಾಗಿ ಪಠ್ಯ ನಿಗಧಿಪಡಿಸುವಾಗ ಮಾನವೀಯ ಮೌಲ್ಯಗಳಿಗೆ ಮತ್ತು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯವನ್ನು ರಚಿಸುವುದು.

## ಕನ್ನಡ ಪಠ್ಯಕ್ರಮ ವಿನ್ಯಾಸದ ಆಶಯಗಳು:

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ಕನ್ನಡ ಭಾಷಾ, ಐಚ್ಛಿಕ, ಮುಕ್ತ ಆಯ್ಕೆ ಕನ್ನಡ, ಕನ್ನಡೇತರರಿಗೆ ಕನ್ನಡ ಪಠ್ಯಕ್ರಮಗಳ ವಿನ್ಯಾಸವನ್ನು ರೂಪಿಸಲಾಗಿದೆ.

ಕರ್ನಾಟಕದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳು ಈ ತನಕ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯ ಪಠ್ಯಕ್ರಮಗಳನ್ನು ಅನುಸರಿಸುತ್ತಾ ಬಂದಿವೆ. ಸಾಹಿತ್ಯದ ಮೂಲಗುಣವಾದ ನಿತ್ಯನೂತನತೆಗೆ ಅನುಗುಣವಾಗಿ ಹೊಸತನವನ್ನು ತರಲು ಪ್ರಯತ್ನಿಸಲಾಗಿದೆ. ಈಗಾಗಲೇ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪ್ರಯೋಗಿಸಲ್ಪಟ್ಟು ಯಶಸ್ವಿಯಾಗಿರುವ 'ವಿಷಯಾಧಾರಿತ ಪಠ್ಯಕ್ರಮ' (Theme Based)ವನ್ನು ಅಳವಡಿಸಿ–ಕೊಳ್ಳಲಾಗಿದೆ. ಈ ಮೂಲಕ ಕಲಿಕೆ ಮತ್ತು ಫಲಿತಗಳ ನಡುವಿನ ಸಮತೋಲನವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಶಿಕ್ಷಣವು ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯ, ಸಾಹಿತ್ಯದ ಮಾನವೀಯ ಸಂವೇದನೆ, ಸಮಕಾಲೀನ ವಿದ್ಯಮಾನಗಳ ಅರಿವು, ಸಂಸ್ಕೃತಿಯ ಬೆಳಕು ಮತ್ತು ರಾಷ್ಟ್ರೀಯತೆಯ ಮನೋಭಾವವನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಬೇಕು ಎನ್ನುವ ಹೊಸ ಶಿಕ್ಷಣ ನೀತಿಯ ಆಶಯವನ್ನು ವಿಷಯಾಧಾರಿತ ಪಠ್ಯಕ್ರಮದ ಮೂಲಕ ಸಾಧಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಉದಾಹರಣೆಗೆ 'ನಾಡು–ನುಡಿ–ಚಿಂತನೆ', 'ಸಾಮರಸ್ಯ', 'ಪರಿಸರ', 'ಜಾಗತೀಕರಣ' ಮೊದಲಾದವು ವಿದ್ಯಾರ್ಥಿಗಳಲ್ಲಿ ಉದ್ದೇಶಿತ ಫಲಿತಗಳನ್ನು ನೀಡುತ್ತವೆ. ಹಾಗೆಯೇ ಆಯಾ ಅಧ್ಯಯನ ಶಿಸ್ತುಗಳ ಸ್ವರೂಪಕ್ಕನುಗುಣವಾಗಿ ಒಂದು ಘಟಕವನ್ನು ಆಯಾ ಅಧ್ಯಯನ ಮಂಡಳಿಗಳೇ ರೂಪಿಸುವ ಅವಕಾಶವನ್ನು ಮುಕ್ತವಾಗಿ ಇರಿಸಲಾಗಿದೆ.

ಭಾಷಾ ಪಠ್ಯಗಳನ್ನು ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರಥಮ ಭಾಷೆಯಾಗಿ ಬೋಧಿಸತಕ್ಕದ್ದು.

ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ–ಕನ್ನಡ ಕಲಿ) ಪಠ್ಯಕ್ರಮವನ್ನು ಎರಡು ಸೆಮಿಸ್ಟರ್‌ಗಳಲ್ಲಿ ಬೋಧಿಸುವುದು. ಪ್ರತಿ ಸೆಮಿಸ್ಟರ್‌ಗೂ ೩ ಕ್ರೆಡಿಟ್‌ಗಳು ಹಾಗೂ ನಾಲ್ಕು ಗಂಟೆ ಬೋಧನಾ ಅವಧಿ ಇರುತ್ತದೆ. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗೆ ಮಾದರಿಗಾಗಿ ಎರಡು ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದ್ದು, ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳು ಇತರ ಪತ್ರಿಕೆಗಳನ್ನು ರೂಪಿಸಲು ಅವಕಾಶವಿದೆ. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗಳನ್ನು ಎಲ್ಲ ಅಧ್ಯಯನ ಶಿಸ್ತುಗಳ ವಿದ್ಯಾರ್ಥಿಗಳೂ ನಾಲ್ಕು ಸೆಮಿಸ್ಟರ್‌ಗಳಿಗೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.

ಐಚ್ಛಿಕ ಕನ್ನಡ ಪಠ್ಯಕ್ರಮದ ವಿವರಗಳನ್ನು ಅನುಬಂಧ ಎರಡರಲ್ಲಿ ನೀಡಲಾಗಿದೆ.

ವಿದ್ಯಾರ್ಥಿಗಳಿಗೆ ಕಲಿಕೆಯು ಹೆಚ್ಚು ಪ್ರಾಯೋಗಿಕವಾಗುವಂತೆ 'ಕ್ರಿಯಾ ಪುಸ್ತಕ'(Work Book)ವನ್ನು ರೂಪಿಸಲು ಅವಕಾಶವಿದೆ.

**ಕನ್ನಡ ಭಾಷಾ ಪಠ್ಯಗಳು ಮತ್ತು ಸ್ವರೂಪ :**

ಅ.

1. ಬಿ.ಎ–ಕಲಾ ಕನ್ನಡ
2. ಬಿ.ಎಸ್ಸಿ–ವಿಜ್ಞಾನ ಕನ್ನಡ
3. ಬಿ.ಕಾಂ–ವಾಣಿಜ್ಯ ಕನ್ನಡ
4. ಬಿ.ಬಿ.ಎ/ ಬಿ.ಬಿ.ಎಂ– ವ್ಯವಹಾರ ಕನ್ನಡ
5. ಬಿ.ಸಿ.ಎ–ಗಣಕ ಕನ್ನಡ
6. ಬಿ.ಎಸ್ಸಿ (ಫ್ಯಾಡ್)–ವಿನ್ಯಾಸ ಕನ್ನಡ

(ಬಿ.ವಿ.ಎ., ಬಿ.ಎಸ್.ಡಬ್ಲ್ಯೂ, ಬಿ.ಎಫ್.ಎ. ಇತ್ಯಾದಿ ಆಯಾ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಅಧ್ಯಯನ ಶಿಸ್ತುಗಳಿಗೆ ಪ್ರತ್ಯೇಕ ಪಠ್ಯ ಕ್ರಮಗಳನ್ನು ಆಯಾ ಬಿಒಎಸ್‌ಗಳು ಸಿದ್ಧಪಡಿಸಿಕೊಳ್ಳುವುದು.)

**ಆ. ಮುಕ್ತ ಆಯ್ಕೆ ಕನ್ನಡ ವಿಷಯ ಪತ್ರಿಕೆಗಳು :**

1. ಕನ್ನಡ ರಂಗಭೂಮಿ ಮತ್ತು ಪ್ರಯೋಗ
2. ಕನ್ನಡ ಭಾಷಾಂತರ : ತತ್ವ ಮತ್ತು ಪ್ರಯೋಗ

ಇಲ್ಲಿ ನೀಡಿರುವ ಪಠ್ಯಗಳ ಶೀರ್ಷಿಕೆ ಕೇವಲ ಮಾದರಿಯಾಗಿದ್ದು ಆಯಾ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ ಪಠ್ಯ ಶೀರ್ಷಿಕೆಯನ್ನು ನೀಡುವ ಅವಕಾಶವನ್ನು ನೀಡಲಾಗಿದೆ.

ಇ. **ಐಚ್ಛಿಕ ಕನ್ನಡ– ಪ್ರಥಮ, ದ್ವಿತೀಯ, ತೃತೀಯ ಹಾಗೂ ಆನರ್ಸ್ ಮತ್ತು ಸ್ನಾತಕೋತ್ತರ ಪದವಿಗಳಿಗೂ ನಿಗದಿಪಡಿಸಿರುವ ಕ್ರೆಡಿಟ್‌ಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ನೀಡಲಾಗಿದೆ.**

**ವಿಶೇಷ ಸೂಚನೆ:** ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಮಂಡಳಿಗಳು ರಾಜ್ಯ ಸಮಿತಿಯ ಪಠ್ಯಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳದೆ ಕೇವಲ ಮುಕ್ತ ಆಯ್ಕೆ ವಿಷಯ ಹಾಗೂ ಸಂಕೀರ್ಣ ಘಟಕಗಳಲ್ಲಿ ಆಯಾ ಪ್ರಾದೇಶಿಕತೆಗೆ ಅನುಗುಣವಾಗಿ ಪಠ್ಯಕ್ರಮ ರೂಪಿಸಿಕೊಳ್ಳುವುದು.

## Course Articulation Matrix: Mapping of Course Outcomes (COs) with Program Outcomes (POs 1-12)

| Sl. No. | Course Outcomes (COs) / Program Outcomes (POs) | 1 ಬಿ.ಎ | 2 ಬಿ.ಎಸ್ಸಿ | 3 ಬಿ.ಕಾಂ | 4 ಬಿ.ಬಿ.ಎ ಬಿ.ಬಿ.ಎಂ | 5 ಬಿ.ಸಿ.ಎ | 6 ಬಿ.ಎಸ್ಸಿ (ಫ್ಯಾಡ್) | 7 ಐಚ್ಛಿಕ ಕನ್ನಡ | 8 ಕನ್ನಡೇತರರಿಗೆ ಕನ್ನಡ | 9 ಮುಕ್ತ ಆಯ್ಕೆ ಕನ್ನಡ | 10 | 11 | 12 |
|---|---|---|---|---|---|---|---|---|---|---|---|---|---|
| 1 | ವಿವಿಧ ಬರಹಗಾರರು, ಸಾಹಿತ್ಯ ಕೃತಿಗಳು ಮತ್ತು ಸಾಹಿತ್ಯ ಚಳುವಳಿಗಳ ಅರಿವು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | ✓ | | | ✓ | | | | |
| 2 | ವಿವಿಧ ಸಾಹಿತ್ಯ ಪ್ರಕಾರಗಳ ರೂಪ–ಸ್ವರೂಪಗಳ ಬಗೆಗೆ ತಿಳುವಳಿಕೆ ಪಡೆಯುವುದು. | | ✓ | | ✓ | | ✓ | | ✓ | | | | |
| 3 | ಭಾಷೆ–ಸಾಹಿತ್ಯದ ಶ್ರೀಮಂತಿಕೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು. | ✓ | ✓ | ✓ | | ✓ | | ✓ | | | | | |
| 4 | ಸಾಹಿತ್ಯ ಮೂಲಕ ಸಮಾಜೋ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ತಿಳುವಳಿಕೆಯನ್ನು ಹೊಂದುವುದು. | ✓ | ✓ | ✓ | ✓ | | ✓ | | | | | | |
| 5 | ವೈಚಾರಿಕ – ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು | ✓ | ✓ | ✓ | ✓ | | ✓ | ✓ | ✓ | | | | |
| 6 | ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳುವುದು. | ✓ | | ✓ | | ✓ | ✓ | ✓ | | | | | |
| 7 | ಸಾಹಿತ್ಯದ ಓದು, ತಿಳುವಳಿಕೆ ಹಾಗೂ ಬರವಣಿಗೆಯನ್ನು ರೂಢಿಸಿಕೊಳ್ಳುವುದು. | ✓ | ✓ | | ✓ | | ✓ | | | | | | |
| 8 | ನಾಡು–ನುಡಿಯನ್ನು ಕುರಿತ ಅರಿವನ್ನು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | | ✓ | | ✓ | | | | |
| 9 | ಸಮಕಾಲೀನ ವಿದ್ಯಮಾನಗಳ ಅರಿವು | ✓ | ✓ | ✓ | ✓ | | ✓ | ✓ | | | | | |
| 10 | ಸಾಮಾಜಿಕ ಹೊಣೆಗಾರಿಕೆಯ ಅರಿವು. | ✓ | ✓ | | ✓ | | ✓ | | ✓ | | | | |
| 11 | ಸದೃಢ ಬೌದ್ಧಿಕ ವ್ಯಕ್ತಿತ್ವ ನಿರ್ಮಾಣ. | ✓ | | ✓ | ✓ | ✓ | | ✓ | | | | | |

**ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷಾ ವಿಧಾನದ ಸಲಹೆ ಮತ್ತು ಮಾದರಿ:**

ಈ ಸಮಿತಿಯು ಆಂತರಿಕ (ಸಿಐಇ) ಹಾಗು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ (ಎಸ್ಇಇ)ಗಳ ವಿಧಾನವನ್ನು ಕುರಿತಂತೆ ಈ ಕೆಳಗಿನ ಸಲಹೆ ನೀಡಲು ಬಯಸುತ್ತದೆ. ಪಠ್ಯ ಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ ಮೌಲ್ಯಮಾಪನವು ಶೇ. 40 (ಸಿಐಇ) ಅಂಕಗಳನ್ನು ಹಾಗು ಸೆಮಿಸ್ಟರ್ ಕೊನೆಯ ಪರೀಕ್ಷೆಯು ಶೇ. 60 (ಎಸ್ಇಇ) ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

| ಕ್ರ.ಸಂ. | **ಪರೀಕ್ಷಾ ಮಾನದಂಡಗಳು** | **ಅಂಕಗಳು** |
|---|---|---|
| | ಆಂತರಿಕ ನಿರಂತರ ಮೌಲ್ಯಮಾಪನ (ಸಿಐಇ) | |
| **1** | ನಿರಂತರ ಮತ್ತು ಸಮಗ್ರ ಮೌಲ್ಯಮಾಪನ(ಸಿಸಿಇ) | **20** |
| **2** | ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು | **20** |
| | **ಒಟ್ಟು** ಸಿಐಇ( 1+2) | **40** |
| **3** | **ಸೆಮಿಸ್ಟರ್ ಅಂತ್ಯದ ಪರೀಕ್ಷೆ ( ಎಸ್ಇಇ)** | **60** |
| | **ಒಟ್ಟು ( ಸಿಐಇ ಮತ್ತು ಎಎಸ್ಇಇ)=** | **100** |

**1) ಆಂತರಿಕ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) :**

ಈ ವಿಧಾನಕ್ಕೆ 20 ಅಂಕಗಳನ್ನು ನಿಗದಿಪಡಿಸಿದ್ದು, ತರಗತಿಯೊಳಗಿನ ವಿದ್ಯಾರ್ಥಿಯ ವಿಚಾರ ಸಂಕಿರಣ (05 ಅಂಕಗಳು), ಗೃಹ ನಿಯೋಜಿತ ಕಾರ್ಯ (05 ಅಂಕಗಳು), ಗುಂಪು ಚರ್ಚೆ (05 ಅಂಕಗಳು) ಮತ್ತು ಹಾಜರಾತಿ (05 ಅಂಕಗಳು) ಅಥವಾ ಇತರೆ ಯಾವುದೇ ಮಾನದಂಡಗಳನ್ನು ರೂಪಿಸಿಕೊಳ್ಳಬಹುದು.

**2) ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು (ಐಎಟಿ):**

ಈ ಭಾಗದಲ್ಲಿ ಒಂದು ಸೆಮಿಸ್ಟರ್ ಅವಧಿಗೆ ಎರಡು ಆಂತರಿಕ ಪರೀಕ್ಷೆಗಳನ್ನು ನಡೆಸುವುದು. ಪ್ರತಿ ಪರೀಕ್ಷೆಯನ್ನು 25+25 ಅಂಕಗಳಿಗೆ ಏರ್ಪಡಿಸಿ ಇವುಗಳನ್ನು 10+10 ಅಂಕಗಳಿಗೆ ಸಮೀಕರಿಸಿ–ಕೊಳ್ಳುವುದು ಅಥವಾ ಬೇರೆ ಯಾವುದೇ ಮಾನದಂಡಗಳ ಮೂಲಕ ಆಂತರಿಕ ಪರೀಕ್ಷೆಗಳನ್ನು ನಡೆಸಬಹುದು.

**3) ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್ಇಇ):**

ಈ ವಿಧಾನವು 60 ಅಂಕಗಳ ಲಿಖಿತ ಪರೀಕ್ಷೆಗಳಿಂದ ಕೂಡಿರುತ್ತದೆ. ಈ ಪರೀಕ್ಷೆಯು ಆಯಾ ವಿಶ್ವವಿದ್ಯಾಲಯಗಳು ಹಾಗೂ ಸ್ವಾಯತ್ತ (ಅಟಾನಮಸ್) ಕಾಲೇಜುಗಳ ಪರೀಕ್ಷಾ ನಿಯಮಾನುಸಾರ ನಡೆಯುವುದರಿಂದ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಪರೀಕ್ಷಾ ಅರ್ಹತೆಗಳನ್ನು ವಿದ್ಯಾರ್ಥಿಯು ಪರಿಪೂರ್ಣಗೊಳಿಸಬೇಕು. ನಂತರ ಆಯಾ ವಿಶ್ವವಿದ್ಯಾಲಯಗಳ ಬಿಓಎಸ್‌ಗಳು, ಬಿಓಇ ಸದಸ್ಯರು ರೂಪಿಸುವ ಮಾನದಂಡಗಳಂತೆ ಪರೀಕ್ಷೆ ನಡೆಯಲಿದೆ.

**ಅ. ಭಾಷಾ ಕನ್ನಡ ಪಠ್ಯಚೌಕಟ್ಟು:**

**ಬಿ.ಎ. – ಕನ್ನಡ ಭಾಷಾ ಪಠ್ಯ :**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು– 1,2,3,4 ಸೆಮಿಸ್ಟರ್‌ಗಳು.

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಪ್ರಕೃತಿ 15 ಗಂಟೆಗಳು | ಬಾಲ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ಜಾಗತೀಕರಣ 15 ಗಂಟೆಗಳು | ಸಮಾಜ 15 ಗಂಟೆಗಳು | ಪ್ರೀತಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇಸೆಮಿಸ್ಟರ್ L-3 | ರಾಷ್ಟ್ರೀಯತೆ 15 ಗಂಟೆಗಳು | ಕೃಷಿ 15 ಗಂಟೆಗಳು | ಕ್ರೀಡೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ಕಾಯಕ 15 ಗಂಟೆಗಳು | ಬಡತನ 15 ಗಂಟೆಗಳು | ಕಾಲ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**ಬಿ.ಎಸ್ಸಿ–ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು– 1,2,3,4 ಸೆಮಿಸ್ಟರ್‌ಗಳು

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಭೂಮಿ 15 ಗಂಟೆಗಳು | ವೈಜ್ಞಾನಿಕ ಮನೋಧರ್ಮ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ಜೀವನ ಕಲೆ 15 ಗಂಟೆಗಳು | ಕನಸು 15 ಗಂಟೆಗಳು | ಮಳೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇ ಸೆಮಿಸ್ಟರ್ L-3 | ಮಾನವೀಯತೆ 15 ಗಂಟೆಗಳು | ಪ್ರವಾಸ 15 ಗಂಟೆಗಳು | ವಿಚಾರ ಕ್ರಾಂತಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ದಮನಿತ ಲೋಕ 15 ಗಂಟೆಗಳು | ಸಹಿಷ್ಣುತೆ 15 ಗಂಟೆಗಳು | ಶ್ರೀಸಾಮಾನ್ಯರ ಬದುಕು 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

## ಬಿ.ಕಾಂ–ಕನ್ನಡ ಭಾಷಾ ಪಠ್ಯ

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು– 1,2,3,4 ಸೆಮಿಸ್ಟರ್‌ಗಳು.

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಸಂಸ್ಕೃತಿ 15 ಗಂಟೆಗಳು | ಜಾಗತೀಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ಸೌಂದರ್ಯ 15 ಗಂಟೆಗಳು | ಭಕ್ತಿ 15 ಗಂಟೆಗಳು | ದೇಸಿಯತೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇ ಸೆಮಿಸ್ಟರ್ L-3 | ಮನರಂಜನಾ ಮಾಧ್ಯಮ 15 ಗಂಟೆಗಳು | ಮಾರುಕಟ್ಟೆ 15 ಗಂಟೆಗಳು | ಲಿಂಗ ಸಮಾನತೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ಕಡಲು 15 ಗಂಟೆಗಳು | ಸಹಬಾಳ್ವೆ 15 ಗಂಟೆಗಳು | ಸಾವು 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

## ಬಿ.ಬಿ.ಎ–ಕನ್ನಡ ಭಾಷಾ ಪಠ್ಯ

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು– 1,2,3,4 ಸೆಮಿಸ್ಟರ್‌ಗಳು

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಆಧುನಿಕತೆ 15 ಗಂಟೆಗಳು | ಕುಟುಂಬ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ಕಾಯಕ 15 ಗಂಟೆಗಳು | ಸಾಮರಸ್ಯ 15 ಗಂಟೆಗಳು | ಅಂತಃಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇ ಸೆಮಿಸ್ಟರ್ L-3 | ಸಮಾಜ 15 ಗಂಟೆಗಳು | ವೈಚಾರಿಕತೆ 15 ಗಂಟೆಗಳು | ಜೀವನ ಮತ್ತು ಕಲೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ಯುದ್ಧ 15 ಗಂಟೆಗಳು | ರಾಷ್ಟ್ರೀಯತೆ 15 ಗಂಟೆಗಳು | ಶಾಂತಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

## ಬಿ.ಸಿ.ಎ–ಕನ್ನಡ ಭಾಷಾ ಪಠ್ಯ

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು – 1, 2, 3, 4 ಸೆಮಿಸ್ಟರ್‌ಗಳು

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಆಕಾಶ 15 ಗಂಟೆಗಳು | ತಾರುಣ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ವಾಣಿಜ್ಯ 15 ಗಂಟೆಗಳು | ತಂತ್ರಜ್ಞಾನ 15 ಗಂಟೆಗಳು | ದಾಂಪತ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇ ಸೆಮಿಸ್ಟರ್ L-3 | ದೈನಂದಿನ ಲಯ 15 ಗಂಟೆಗಳು | ಸೌಹಾರ್ದ 15 ಗಂಟೆಗಳು | ಸ್ವಾತಂತ್ರ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ನಾಗರಿಕತೆ 15 ಗಂಟೆಗಳು | ಅಭಿವೃದ್ಧಿ 15 ಗಂಟೆಗಳು | ಕರುಣೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

## ಬಿ.ಎಸ್ಸಿ(FAD)–ಕನ್ನಡ ಭಾಷಾ ಪಠ್ಯ

**ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು**

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04 (ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L-1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಸೌಂದರ್ಯ 15 ಗಂಟೆಗಳು | ಒಲುಮೆ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L-2 | ಮಾರುಕಟ್ಟೆ 15 ಗಂಟೆಗಳು | ಪರಿಸರ 15 ಗಂಟೆಗಳು | ಅಂತಃಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಮೂರನೇ ಸೆಮಿಸ್ಟರ್ L-3 | ಅಭಿವೃದ್ಧಿ 15 ಗಂಟೆಗಳು | ಹಸಿವು 15 ಗಂಟೆಗಳು | ಶೈಲಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ನಾಲ್ಕನೇ ಸೆಮಿಸ್ಟರ್ L-4 | ಕೈಮಗ್ಗ ಪರಂಪರೆ 15 ಗಂಟೆಗಳು | ಅಹಿಂಸೆ 15 ಗಂಟೆಗಳು | ವಾಸ್ತುಶಿಲ್ಪ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

ಬ. ಮುಕ್ತ ಆಯ್ಕೆ ಪತ್ರಿಕೆಯ ಕನ್ನಡ ಪಠ್ಯ ಚೌಕಟ್ಟು (OE)

| | |
|---|---|
| ಮೂರನೇಸೆಮಿಸ್ಟರ್ (ಕ್ರೆಡಿಟ್ 03) OE-3 | 1. ಕನ್ನಡ ಭಾಷಾಂತರ : ತತ್ವ ಮತ್ತು ಪ್ರಯೋಗ |
| ನಾಲ್ಕನೇ ಸೆಮಿಸ್ಟರ್ (ಕ್ರೆಡಿಟ್ 03) OE-4 | 1. ಕನ್ನಡ ರಂಗಭೂಮಿ ಮತ್ತು ಪ್ರಯೋಗ |

**ಕ. ಐಚ್ಛಿಕ ಕನ್ನಡ ಪಠ್ಯ ವಿನ್ಯಾಸ :**

## 1 ರಿಂದ 10 ಸೆಮಿಸ್ಟರ್‌ಗಳು (DSC)

| | | |
|---|---|---|
| ಪ್ರಥಮ ಸೆಮಿಸ್ಟರ್ | A-1 ಪತ್ರಿಕೆ–1 | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ (ಆರಂಭದಿಂದ ಹತ್ತನೇ ಶತಮಾನದವರೆಗೆ) **(ಕ್ರೆಡಿಟ್ 03)** |
| | A-2 ಪತ್ರಿಕೆ–2 | ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ (ಹನ್ನೊಂದನೇ ಶತಮಾನದಿಂದ ಹದಿನಾರನೇ ಶತಮಾನ) **(ಕ್ರೆಡಿಟ್ 03)** |
| ಎರಡನೇ ಸೆಮಿಸ್ಟರ್ | A-3 ಪತ್ರಿಕೆ–3 | ಆಧುನಿಕಪೂರ್ವ ಕನ್ನಡ ಸಾಹಿತ್ಯ ಚರಿತ್ರೆ (11 ನೇ ಶತಮಾನದಿಂದ 16ರ ವರೆಗೆ) **(ಕ್ರೆಡಿಟ್ 03)** |
| | A-4 ಪತ್ರಿಕೆ–4 | ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ (20ನೇ ಶತಮಾನದಿಂದ ಮುಂದೆ) **(ಕ್ರೆಡಿಟ್ 03)** |
| ಮೂರನೇ ಸೆಮಿಸ್ಟರ್ | A-5 ಪತ್ರಿಕೆ–5 | ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ **(ಕ್ರೆಡಿಟ್ 03)** |
| | A-6 ಪತ್ರಿಕೆ–6 | ಕನ್ನಡ ಕಾವ್ಯಮೀಮಾಂಸೆಯ ಆಧುನಿಕ ರೂಪಗಳು **(ಕ್ರೆಡಿಟ್ 03)** |
| ನಾಲ್ಕನೇ ಸೆಮಿಸ್ಟರ್ | A-7 ಪತ್ರಿಕೆ–7 | ಸಂಶೋಧನೆ ಮತ್ತು ವಿಮರ್ಶೆ **(ಕ್ರೆಡಿಟ್ 03)** |
| | A-8 ಪತ್ರಿಕೆ–8 | ಜಾನಪದ ಮತ್ತು ಮಹಿಳಾ ಸಾಹಿತ್ಯ **(ಕ್ರೆಡಿಟ್ 03)** |
| ಐದನೇ ಸೆಮಿಸ್ಟರ್ | A-9 ಪತ್ರಿಕೆ–9 | ಛಂದಸ್ಸು, ಕನ್ನಡ ವ್ಯಾಕರಣ ಪರಂಪರೆ : ಶಬ್ದಮಣಿದರ್ಪಣ **(ಕ್ರೆಡಿಟ್ 04)** |
| | A-10 ಪತ್ರಿಕೆ–10 | ದ್ರಾವಿಡಾ ಭಾಷಾ ವಿಜ್ಞಾನ ಮತ್ತು ಕನ್ನಡ ಭಾಷಾ ವಿಜ್ಞಾನ **(ಕ್ರೆಡಿಟ್ 04)** |
| ಆರನೇ ಸೆಮಿಸ್ಟರ್ | A-11 ಪತ್ರಿಕೆ–11 | ಕರ್ನಾಟಕ ಸಂಸ್ಕೃತಿ ಮತ್ತು ಶಾಸನ ಸಾಹಿತ್ಯ **(ಕ್ರೆಡಿಟ್ 04)** |
| | A-12 ಪತ್ರಿಕೆ–12 | ಆಧುನಿಕ ಮಹಾಕಾವ್ಯ / ಕಾದಂಬರಿ ಅಧ್ಯಯನ (ಆಯ್ದ ಭಾಗಗಳು) **(ಕ್ರೆಡಿಟ್ 04)** |

| | | |
|---|---|---|
| ಏಳನೇ ಸೆಮಿಸ್ಟರ್ | A-13<br>ಪತ್ರಿಕೆ–13 | ಕನ್ನಡ ಸಾಹಿತ್ಯ ಚರಿತ್ರೆ (ಪೂರ್ವದ ಹಳಗನ್ನಡ, ಹಳಗನ್ನಡ ಶಾಸನಗಳನ್ನು ಸೇರಿಸಿ)<br>**(ಕ್ರೆಡಿಟ್ 04)** |
| | A-14<br>ಪತ್ರಿಕೆ–14 | ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆ<br>**(ಕ್ರೆಡಿಟ್ 04)** |
| | A-15<br>ಪತ್ರಿಕೆ–15 | ಛಂದಸ್ಸು, ಗ್ರಂಥ ಸಂಪಾದನೆ, ಹಸ್ತಪ್ರತಿ ಶಾಸ್ತ್ರ<br>**(ಕ್ರೆಡಿಟ್ 03)** |
| ಎಂಟನೇ ಸೆಮಿಸ್ಟರ್ | A-16<br>ಪತ್ರಿಕೆ–16 | ಆಧುನಿಕಕನ್ನಡ ಸಾಹಿತ್ಯಚರಿತ್ರೆ<br>**(ಕ್ರೆಡಿಟ್ 04)** |
| | A-17<br>ಪತ್ರಿಕೆ–17 | ಕನ್ನಡ ವ್ಯಾಕರಣ ಪರಂಪರೆ ಮತ್ತು ನಿಘಂಟು ವಿಜ್ಞಾನ<br>**(ಕ್ರೆಡಿಟ್ 04)** |
| | A-18<br>ಪತ್ರಿಕೆ–18 | ದ್ರಾವಿಡ ಭಾಷಾ ವಿಜ್ಞಾನ ಮತ್ತು ಕನ್ನಡ ಭಾಷಾ ವಿಜ್ಞಾನ<br>**(ಕ್ರೆಡಿಟ್ 03)** |

## ಐಚ್ಛಿಕ ಕನ್ನಡ, ಡಿ.ಎಸ್.ಇ(DSE)ಮತ್ತು ವೆಕೇಷನಲ್ ಕೋರ್ಸ್

## ಐದನೇ ಸೆಮಿಸ್ಟರ್‌ನಿಂದ ಪ್ರಾರಂಭ

| | | |
|---|---|---|
| ಐದನೇ ಸೆಮಿಸ್ಟರ್ | **DSE-** A-1<br>ಕ್ರೆಡಿಟ್ 03 | ವಿಶೇಷ ಕವಿ ಅಧ್ಯಯನ (ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದಿಂದ ತಲಾ ಒಬ್ಬ ಕವಿ / ಕವಯತ್ರಿ ಅಧ್ಯಯನ) |
| ಆರನೇ ಸೆಮಿಸ್ಟರ್ | **DSE-** A-2<br>ಕ್ರೆಡಿಟ್ 03 | ಕನ್ನಡ ಮತ್ತು ಸಮೂಹ ಮಾಧ್ಯಮ ಸಂಹವನ ಸಾಹಿತ್ಯ |
| ಏಳನೇ ಸೆಮಿಸ್ಟರ್ | **DSE-** A-3<br>ಕ್ರೆಡಿಟ್ 03 | ವಿಶೇಷ ಕವಿ ಅಧ್ಯಯನ (ಆಧುನಿಕ ಕನ್ನಡ ಸಾಹಿತ್ಯದ ಒಬ್ಬ ಲೇಖಕ / ಲೇಖಕಿಯ ಅಧ್ಯಯನ) |
| | **DSE-** A-4<br>ಕ್ರೆಡಿಟ್ 03 | ಭಾಷಾಂತರ |
| | ಕ್ರೆಡಿಟ್ 03 | ಸಂಶೋಧನಾ ವಿಧಿವಿಧಾನಗಳು |
| ಎಂಟನೇ ಸೆಮಿಸ್ಟರ್ | **DSE-** A-5<br>ಕ್ರೆಡಿಟ್ 03 | ವಿಮರ್ಶಾ ವೈಧಾನಿಕತೆ |
| | **DSE-** A-6<br>ಕ್ರೆಡಿಟ್ 06 | ಸಂಶೋಧನಾ ಪ್ರಬಂಧ ರಚನೆ |

## ಮೈನರ್ ಆಯ್ಕೆ ಪತ್ರಿಕೆ

| | |
|---|---|
| ಐದನೇ ಸೆಮಿಸ್ಟರ್ (ಕ್ರೆಡಿಟ್ 04) **DSE-B-9** | ಕಾವ್ಯ ಮತ್ತು ನಾಟಕ (ಹೊಸಗನ್ನಡದ ಪ್ರಾತಿನಿಧಿಕ 10 ಕವಿತೆಗಳು ಮತ್ತು ಸರ್ವರಿಗೂ ಸಂವಿಧಾನ ನಾಟಕದ ಭಾಗ) |
| ಆರನೇ ಸೆಮಿಸ್ಟರ್ (ಕ್ರೆಡಿಟ್ 04) **DSE-B-10** | ಕಥೆ ಮತ್ತು ಕಾದಂಬರಿ (5 ಪ್ರಾತಿನಿಧಿಕ ಕಥೆ ಮತ್ತು ಕಾದಂಬರಿ) |

Date Course Co-ordinator Subject Committee Chairperson

## ಅನುಬಂಧ

## ರಾಷ್ಟ್ರೀಯ ಶಿಕ್ಷಣ ನೀತಿ – 2020

## ಕನ್ನಡ ಭಾಷಾ ಪಠ್ಯ ಸ್ವರೂಪ (ಪ್ರಥಮ ಭಾಷೆ–ಕಡ್ಡಾಯ ಕನ್ನಡ)

**ಕೋರ್ಸ್‌ವಾರು ಕನ್ನಡ ಭಾಷಾ ಪಠ್ಯಕ್ರಮ:**

ಶೈಕ್ಷಣಿಕ ವ್ಯವಸ್ಥೆಯಲ್ಲಿ ಭಾಷಾ ಪಠ್ಯಗಳು ಮತ್ತು ಭಾಷಾ ಅಧ್ಯಾಪಕರ ಜವಾಬ್ದಾರಿ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹಲವು ಬಗೆಯ ಬಿಕ್ಕಟ್ಟುಗಳು ಮತ್ತು ವಿಷಮತೆಗಳು ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಪ್ರಜ್ಞಾವಂತರನ್ನಾಗಿ, ಸಂವೇದನಾಶೀಲರನ್ನಾಗಿ ಮಾಡುವ ಅವಕಾಶ ಭಾಷಾ ಪಠ್ಯಗಳಲ್ಲಿ ಇರುತ್ತದೆ. ಆ ಅವಕಾಶವನ್ನು ಎಂದಿನಿಂದಲೂ ಭಾಷಾ ಪಠ್ಯ ಮಂಡಳಿಗಳು ಆಸ್ಥೆಯಿಂದ ನಿಭಾಯಿಸುತ್ತಲೇ ಬಂದಿವೆ.

ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಯು ಇದನ್ನೇ ಬುನಾದಿಯಾಗಿಸಿಕೊಂಡು ಪಠ್ಯಕ್ರಮವನ್ನು ಕುರಿತ ನಕಾಶೆಯನ್ನು ರಚಿಸಿದೆ. ಕನ್ನಡವನ್ನು 'ಜ್ಞಾನದ ಭಾಷೆ'ಯಾಗಿ ವಿದ್ಯಾರ್ಥಿಗಳಿಗೆ ನೀಡಬೇಕೆನ್ನುವುದು ಸಮಿತಿಯ ಆಶಯ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಅಂಶವನ್ನೇ ಉದ್ಯೋಗ ಮತ್ತು ಕೌಶಲ್ಯಗಳು ಶಿಕ್ಷಣದ ಮುಖ್ಯ ಗುರಿ ಎಂದು ಹೇಳಿದೆ. ಹೀಗಾಗಿ ತಾಯಿ ಭಾಷೆ ಕನ್ನಡದ ಮೂಲಕ ವಿದ್ಯಾರ್ಥಿಗಳು ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ಸವಾಲುಗಳನ್ನು ಸನ್ನದ್ಧರಾಗುವ ಬಗೆಯಲ್ಲಿ ಪಠ್ಯಕ್ರಮದ ವಿನ್ಯಾಸವನ್ನು ರೂಪಿಸಲಾಗಿದೆ.

ಜಾಗತೀಕರಣವೂ ಸೇರಿದಂತೆ ಹಲವು ವಿದ್ಯಮಾನಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು, ಸಮೀಕರಣಗಳನ್ನು, ಗ್ರಹಿಕೆಗಳನ್ನು ಆಳವಾಗಿ ಪ್ರಭಾವಿಸುತ್ತಿವೆ. ಇವು ನಮ್ಮ ಯುವ ತಲೆಮಾರುಗಳನ್ನು ತಮ್ಮ ಬೇರುಗಳಿಂದಲೇ ದೂರ ಮಾಡುತ್ತಾ ಅವರನ್ನು ಪರಕೀಯರನ್ನಾಗಿಸುತ್ತಿದೆ ಎನ್ನುವ ಆತಂಕ ಅಧ್ಯಾಪಕರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾಡು–ನುಡಿ, ಜಲ, ಭೂಮಿ, ಸಮಕಾಲೀನ ಸವಾಲುಗಳನ್ನು ಕನ್ನಡದ ಅತ್ಯುತ್ತಮ ಪಠ್ಯಗಳ ಮುಖಾಂತರ ಕಲಿಸಬಹುದೆನ್ನುವ ನಂಬಿಕೆ ಈ ಸಮಿತಿಯದ್ದು. ವಿದ್ಯಾರ್ಥಿಗಳಲ್ಲಿ ಸಾಹಿತ್ಯಕ ಅಭಿರುಚಿಯನ್ನು ಹೆಚ್ಚಿಸಬೇಕು, ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತ ಪ್ರೀತಿಯನ್ನು ಹೆಚ್ಚಿಸಬೇಕು ಎನ್ನುವುದು ಪಠ್ಯಗಳ ಒಂದು ಆಯಾಮವಾದರೆ, ಮತ್ತೊಂದು ಆಯಾಮವು ನಮ್ಮ ಸಮೃದ್ಧ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಯ ಅರಿವೂ ಅವರಲ್ಲಿ ಮೂಡಬೇಕೆನ್ನುವುದು.

ಎರಡು ವರ್ಷಗಳ ಪಠ್ಯಗಳಲ್ಲಿ ಅವರಲ್ಲಿ ನಾಗರಿಕ ವ್ಯಕ್ತಿತ್ವದ ಧಾತುಗಳನ್ನು ತುಂಬಬೇಕು. ಸಾಹಿತ್ಯದ ಅಂತಃಕರಣ ಮತ್ತು ಸಾಮಾಜಿಕ ವ್ಯಕ್ತಿತ್ವದ ಬೌದ್ಧಿಕ ಅರಿವು ಅವರಲ್ಲಿ ಸಮನಾಗಿ ಬೆಳೆಯುತ್ತಾ ಹೋಗಬೇಕು. ಇವುಗಳಲ್ಲದೆ ಕನ್ನಡವು ಅವರ ವೃತ್ತಿಯ ದಾರಿಯೂ ಆಗಬೇಕು. ಹಲವು ವೃತ್ತಿಗಳನ್ನು ಅವರು ಆರಿಸಿಕೊಳ್ಳಲು ಅನುವಾಗುವ ಪಠ್ಯಕ್ರಮವೂ ಸೇರಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು 'ವಿಷಯಾಧಾರಿತ ಪಠ್ಯ'ವನ್ನು ರೂಪಿಸಿದೆ.

ಯಾವುದೇ ಕೋರ್ಸಿನ ಮೊದಲ ಸೆಮಿಸ್ಟರ್‌ನ ಮೊದಲ ಭಾಗವಾಗಿ (ನಾಲ್ಕು ಭಾಗಗಳಲ್ಲಿ) ಕನ್ನಡ ನಾಡು–ನುಡಿಯನ್ನು ಕುರಿತ ಭಾಗವು ಕಡ್ಡಾಯವಾಗಿ ಇರಬೇಕು. ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ

ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಆಯಾ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳು ಪಠ್ಯಕ್ರಮವನ್ನು ರೂಪಿಸಿಕೊಳ್ಳಬಹುದಾಗಿದೆ. ನಾಲ್ಕರಲ್ಲಿ ಕೊನೆಯ ಭಾಗವನ್ನು ಕಡ್ಡಾಯವಾಗಿ ಸಂಕೀರ್ಣ / ತಾಂತ್ರಿಕ / ವೃತ್ತಿ ತರಬೇತಿ ಆಶಯದ / ವೃತ್ತಿ ನೈಪುಣ್ಯತೆ / ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ.... ಹೀಗೆ ಇದು ಆಯಾ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ.

ಇದಕ್ಕೆ ಪೂರಕವಾಗಿ ಹಲವು ವಿಷಯಗಳನ್ನು ಸಮಿತಿಯು ಆಯ್ಕೆ ಮಾಡಿದೆ. ಸದ್ಯಕ್ಕೆ ತೃತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳಿಗೆ ಇವುಗಳನ್ನು ಸ್ಥೂಲವಾಗಿ ಆರಿಸಲಾಗಿದ್ದು, ಆಯಾ ಘಟಕಗಳ ಆಶಯಕ್ಕೆ ಅನುಗುಣವಾಗಿ ಅಧ್ಯಯನ ಮಂಡಳಿಗಳು ಪಠ್ಯಗಳನ್ನು ಬೇರೆ ಬೇರೆ ಮೂಲಗಳಿಂದ ಮತ್ತು ಇಲ್ಲದೆ ಇರುವ ಹೊಸ ಆಯಾಮಗಳನ್ನು ಸೇರಿಸಿಕೊಳ್ಳಬಹುದು. ಕನ್ನಡೇತರರಿಗೆ ಕನ್ನಡ ಕಲಿ ಪತ್ರಿಕೆಗಳನ್ನು ಕನ್ನಡ ಅಧ್ಯಾಪಕರೇ ಬೋಧಿಸಬೇಕು.

ಮುಂದಿನ ದಿನಗಳಲ್ಲಿ ಐದು ಮತ್ತು ಆರನೆಯ ಸೆಮಿಸ್ಟರ್‌ನ ಪಠ್ಯಗಳ ರೂಪುರೇಷೆಗಳನ್ನು ತಿಳಿಸಲಾಗುವುದು.

## ಪಠ್ಯಕ್ರಮಗಳನ್ನು ಕುರಿತು ಕೆಲವು ಸಲಹೆ ಸೂಚನೆಗಳು:

**ಕನ್ನಡ ಭಾಷಾ ಪಠ್ಯ :**

೧. ಪ್ರತಿ ಪದವಿ ಕ್ರಮಕ್ಕೂ (StreamWise) ಪ್ರತ್ಯೇಕ ಪಠ್ಯಗಳನ್ನು ರೂಪಿಸಬೇಕು.

೨. ಪ್ರತಿ ಸೆಮಿಸ್ಟರ್‌ಗೆ ನಾಲ್ಕು ಗಂಟೆಗಳ ಬೋಧನಾ ಅವಧಿ ಕಡ್ಡಾಯವಾಗಿರಬೇಕು.

೩. ಪಠ್ಯಗಳ ಆಶಯಗಳನ್ನು ಕುರಿತ ಆರಂಭಿಕ ಟಿಪ್ಪಣಿ ಇರಬೇಕು.

೪. ಎರಡು ಸೆಮಿಸ್ಟರ್‌ಗಳನ್ನು ಸೇರಿಸಿ ಒಂದೊಂದು ಪಠ್ಯ ಪುಸ್ತಕವನ್ನು ಮಾಡುವುದು.

೫. ಪ್ರತಿ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ನಾಲ್ಕು ಘಟಕಗಳು ಹಾಗೂ ಪ್ರತಿ ಘಟಕದಲ್ಲಿ ಮೂರು ಮೂರು ಅಧ್ಯಾಯಗಳು ಇರಬೇಕು.

೬. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು (ಅನುವಾದ, ಜಾನಪದ, ಮಹಿಳಾ ಮತ್ತು ಅಲಕ್ಷಿತ ಸಮುದಾಯ, ಅಲ್ಪಸಂಖ್ಯಾತ ವರ್ಗಗಳು) ಸೇರಿದಂತೆ ಒಳಗೊಳ್ಳುವಂತೆ ಅಧ್ಯಯನ ಮಂಡಳಿಯು ಕಾಳಜಿ ವಹಿಸಬೇಕು.

೭. ಕಡ್ಡಾಯ ಕನ್ನಡ ಭಾಷಾ ಪಠ್ಯಕ್ರಮ ವಿನ್ಯಾಸದಲ್ಲಿ ನಾಲ್ಕನೆಯ ಘಟಕದಲ್ಲಿ (ಸಂಕೀರ್ಣ) ಶೀರ್ಷಿಕೆಯನ್ನೂ ಒಳಗೊಂಡಂತೆ ಪಠ್ಯಕ್ರಮವನ್ನು ರೂಪಿಸುವುದನ್ನು ಅಧ್ಯಯನ ಮಂಡಳಿಗಳ ತೀರ್ಮಾನಕ್ಕೆ ಬಿಡಲಾಗಿದೆ. ವೃತ್ತಿಪರ, ತಾಂತ್ರಿಕ ತರಬೇತಿ, ಕೌಶಲ್ಯಾಧಾರಿತ ಮತ್ತು ಸೃಜನಶೀಲ ಚಟುವಟಿಕೆ ಹೀಗೆ ಆಯಾ ಪದವಿಕ್ರಮ (Stream Wise)ಗಳಿಗೆ ಪೂರಕವಾಗುವಂತೆ ಪಠ್ಯಕ್ರಮವನ್ನು ರೂಪಿಸಬೇಕು.

೮. ವಿದ್ಯಾರ್ಥಿಗಳ ಸೃಜನಶೀಲತೆ, ಭಾಷಾ ನೈಪುಣ್ಯ, ಬರೆಹ ಕೌಶಲ್ಯ, ವಿಶ್ಲೇಷಣಾ ಸಾಮರ್ಥ್ಯ, ಸಮಕಾಲೀನ ಗೊಳಿಸುವಿಕೆ ಮತ್ತು ಅನುವಾದ ಸಾಮರ್ಥ್ಯಗಳನ್ನು ಹೆಚ್ಚಿಸುವುದನ್ನು ಗಮನದಲ್ಲಿಟ್ಟುಕೊಂಡು ನಿಯೋಜಿತ ಕಾರ್ಯ, ಸಾಹಿತ್ಯಕ ಕಾರ್ಯಕ್ರಮ ಇತ್ಯಾದಿಗಳನ್ನು ಆಯೋಜಿಸಬೇಕು.

೯. ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೃತ್ತಿಪರ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಅವರ ಸಮಗ್ರ ವ್ಯಕ್ತಿತ್ವವನ್ನು ವೃತ್ತಿಪರವಾಗಿ ಸಜ್ಜುಗೊಳಿಸಲು

ಅನುಕೂಲವಾಗುವಂತೆ ಇರಬೇಕು. ಇದನ್ನು ಅಧ್ಯಯನ ಮಂಡಳಿ ಹಾಗೂ ಬೋಧಕರು ಗಮನದಲ್ಲಿಟ್ಟುಕೊಳ್ಳಬೇಕು.

೧೦. ಪೂರಕ ಪಠ್ಯಗಳಾಗಿ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳನ್ನು ಅವಶ್ಯವಾಗಿ ಬಳಸಿಕೊಳ್ಳಬೇಕು.

೧೧. ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಪ್ರಯೋಗಾಲಯ (Language Lab) ಇರುವುದು ಅಪೇಕ್ಷಣೀಯ. ಇದರ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಕೆಯೂ ಸೇರಿದಂತೆ ಇತರ ತಾಂತ್ರಿಕ ಕಲಿಕೆಗಳನ್ನು ತಿಳಿಸಿಕೊಡಬಹುದು. (ಕನ್ನಡದಲ್ಲಿ ವರದಿ ಬರೆಯುವುದು, ಅನುವಾದ ಮಾಡುವುದು ಇತ್ಯಾದಿ).

೧೨. ಭಾಷಾ ಪಠ್ಯ ವಿನ್ಯಾಸದಲ್ಲಿ ನೀಡಲಾಗಿರುವ ಪರಾಮರ್ಶನ ಪಠ್ಯಗಳು ಅಂತಿಮವಲ್ಲ. ಅವು ಪ್ರಾತಿನಿಧಿಕ ಮತ್ತು ಮಾದರಿ ಮಾತ್ರ. ಅಂತಿಮವಾಗಿ ಆಯ್ಕೆಯು ಆಯಾ ಅಧ್ಯಯನ ಮಂಡಳಿಗಳ ವಿವೇಚನಾಧಿಕಾರಕ್ಕೆ ಬಿಟ್ಟದ್ದು.

೧೩. ಪ್ರತಿ ಪಠ್ಯದಲ್ಲೂ ಪ್ರತಿ ಘಟಕದ ವಿಷಯ (Theme) ವನ್ನು ಕುರಿತು ಟಿಪ್ಪಣಿ ಇರಬೇಕು.

೧೪. ಪಠ್ಯದ ಕೊನೆಯಲ್ಲಿ ಪೂರಕ ಪಠ್ಯಗಳ ಪಟ್ಟಿಯನ್ನು ಕೊಡಬೇಕು. ಪೂರಕ ಪಠ್ಯವನ್ನೂ ನೀಡಬಹುದು. ಪಠ್ಯದ ಮೊದಲು ಆಶಯ ಪಠ್ಯವನ್ನೂ ಸೇರಿಸಬಹುದು.

೧೫. ಭಾಷಾಭ್ಯಾಸದಲ್ಲಿ ವಿದ್ಯಾರ್ಥಿಗಳ ಸ್ವಂತಿಕೆಗೆ ಅವಕಾಶ ಇರಬೇಕು.

೧೬. ಮುಕ್ತ ಆಯ್ಕೆ (OE – ಓಪನ್ ಇಲೆಕ್ಟಿವ್) ಪತ್ರಿಕೆಗಳನ್ನು ವಿದ್ಯಾರ್ಥಿಗಳ ವೃತ್ತಿಪರತೆಯನ್ನು ಹೆಚ್ಚಿಸುವ ಸಲುವಾಗಿ ರೂಪಿಸಲಾಗಿದ್ದು, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಈ ವಿಷಯಗಳ ಮಹತ್ವವನ್ನು ಕುರಿತು ಮನವರಿಕೆ ಮಾಡಿಕೊಡಬೇಕು.

೧೭. ಪಠ್ಯ ಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು – ೧, ೨, ೩, ೪ ಸೆಮಿಸ್ಟರ್‌ಗಳು.

## ಬಿ. ಎ. / ಬಿ.ಎಸ್ಸಿ. / ಬಿ.ಕಾಂ. / ಬಿ.ಬಿ.ಎ. / ಬಿ.ಸಿ.ಎ. / ಬಿ.ಎಸ್ಸಿ.(ಫ್ಯಾಡ್)–ಕನ್ನಡ ಭಾಷಾ ಪಠ್ಯ :

## 3ನೇ ಸೆಮಿಸ್ಟರ್

| **Course Title : ಬಿ. ಎ. – ಕನ್ನಡ ಭಾಷಾ ಪಠ್ಯ :** | |
|---|---|
| Total Contact Hours : 52 to 56 | Course Credits : 03 |
| Formative Assessment Marks : 40 (CIE) | Duration of ESA / Exam : 2 hours |
| Model Syllabus Authors : Multiple Authors | Summative Assessment Marks : 60 (SEE) |

**ಕೋರ್ಸ್‌ಗಳ ವಿವರಗಳು :**

| ವಿವರಗಳು | ಬೋಧನಾ ಅವಧಿ |
|---|---|
| **ಘಟಕ–೩.೧ :** ರಾಷ್ಟ್ರೀಯತೆ | 13/14 |
| **ಘಟಕ–೩.೨ :** ಕೃಷಿ | 13/14 |
| **ಘಟಕ–೩.೩ :** ಕ್ರೀಡೆ | 13/14 |
| **ಘಟಕ–೩.೪ :** ಸಂಕೀರ್ಣ | 13/14 |

## ಬಿ.ಎ. ೩ನೇ ಸೆಮಿಸ್ಟರ್

**ಘಟಕ–೩.೧ : ರಾಷ್ಟ್ರೀಯತೆ**

ರಾಷ್ಟ್ರೀಯತೆ ಎಂಬ ಪದವು ೧೭೭೦ ರ ದಶಕದ ಕೊನೆಯಲ್ಲಿ ಜೊಹಾನ್ ಒಟ್‌ಫ್ರೆಡ್ ಹರ್ಡರ್ ನಿಂದ ಸೃಷ್ಟಿಯಾದ ನ್ಯಾಶನಾಲಿಸಂ ಎಂಬ ಪದದಿಂದ ರೂಪಿತವಾಗಿದೆ. ರಾಷ್ಟ್ರೀಯತೆಯ ಪರಿಕಲ್ಪನೆ ಎಲ್ಲಿ ಯಾವಾಗ ಉದ್ಭವಿಸಿತು ಎಂದು ಗುರುತಿಸಲು ಸಾಧ್ಯವಿಲ್ಲವಾದರೂ ಅದು ೧೮ನೇ ಶತಮಾನದ ಫ್ರೆಂಚ್ ಕ್ರಾಂತಿ ಹಾಗೂ ಅಮೇರಿಕಾದ ಕ್ರಾಂತಿಯ ಜೊತೆ ಜನಪ್ರಿಯ ಸಾರ್ವಭೌಮತ್ವದ ಪ್ರೇರಣೆಯ ಮೂಲಕ ಅಸ್ತಿತ್ವಕ್ಕೆ ಬಂದಿತು. ಜಗತ್ತು ಎದುರಿಸಿದ ಎರಡೂ ಮಹಾಯುದ್ಧಗಳ ನಂತರ ಈ ಪರಿಕಲ್ಪನೆಯು ಪ್ರಮುಖವಾದ ರಾಜಕೀಯ ಹಾಗೂ ಸಾಮಾಜಿಕ ಶಕ್ತಿಯಾಗಿ ಬೆಳೆಯಿತು. ಸಂಪೂರ್ಣ ನಿಷ್ಠೆ ಹಾಗೂ ಆಜ್ಞಾಪಾಲನೆಯನ್ನು ಬಯಸುತ್ತದೆ. ರಾಷ್ಟ್ರದ ಹಿತಾಸಕ್ತಿಯತ್ತ ಮುಖಮಾಡಿ ಆ ನಿಟ್ಟಿನಲ್ಲಿ ಸೇವೆಯನ್ನು ಬಯಸುತ್ತದೆ.

"ಒಟ್ಟಿಗೆ ಕೂಡಿ ಬಾಳನ್ನು ಮುಂದುವರಿಸುವ ಜನರ ಅಭಿಪ್ರಾಯದ ಪ್ರತಿದಿನದ ಜನಮತವೇ ರಾಷ್ಟ್ರ"ವೆಂದು ಅರ್ನಸ್ಟ್ರೆನೆನ್ ವ್ಯಾಖ್ಯಾನಿಸಿದ್ದಾನೆ. ಒಂದು ನಿರ್ದಿಷ್ಟ ರಾಷ್ಟ್ರದ ಎಲ್ಲ ನಿವಾಸಿಗಳೂ ತಾವು ಜನಿಸಿದ ಅಥವಾ ಸ್ವೀಕರಿಸಿದ ದೇಶದ ಬಗೆಗೆ ಪ್ರೀತಿ, ನಿಷ್ಠೆಯಿಂದ ಋಣಿಯಾಗಿರುತ್ತಾರೆಂದೂ, ಇರಬೇಕೆಂದೂ ಭಾವಿಸಲಾಗುತ್ತಿದೆ. ಪ್ರಾದೇಶಿಕ ರಾಷ್ಟ್ರೀಯವಾದವು ಜನ ಸಮುದಾಯದ ಸಾಮಾನ್ಯ ಮೌಲ್ಯ ಮತ್ತು ಸಂಪ್ರದಾಯಗಳ ಆಧಾರದ ಮೇಲೆ ಸಾಮೂಹಿಕತೆಯನ್ನು ಸಾರ್ವಜನಿಕ ಸಂಸ್ಕೃತಿಯನ್ನು ಬೆಳೆಸುವಂತದ್ದಾಗಿರುತ್ತದೆ. ಈ ಮನೋಧರ್ಮವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕೆಂಬ ಆಶಯವು ಈ ಪಠ್ಯಕ್ರಮದ ಪರಿಕಲ್ಪನೆಯಾಗಿದೆ.

೧. ಹುತ್ತರಿಹಾಡು – ಪಂಜೆ ಮಂಗೇಶರಾಯರು.

೨. ಹಚ್ಚೇವು ಕನ್ನಡದ ದೀಪ – ಡಿ.ಎಸ್.ಕರ್ಕಿ

೩. ಬನವಾಸಿ ವರ್ಣನೆ – ಪಂಪಭಾರತದ ತೃತೀಯ ಆಶ್ವಾಸದ ಆಯ್ದ ಪದ್ಯಗಳು.

೪. ಆಂಡಯ್ಯ ಕವಿಯ 'ಕಬ್ಬಿಗರ ಕಾವ'ದ ಆಯ್ದ ಭಾಗಗಳು.

೫. ನಂಜುಂಡ ಕವಿಯ ರಾಮನಾಥ ಚರಿತೆ : ಕನ್ನಡ ನಾಡಿನ ವರ್ಣನೆಯ ಆಯ್ದ ಪದ್ಯಭಾಗಗಳು –ಎಚ್.ದೇವೀರಪ್ಪ (ಸಂ).

೬. ಎಲ್ಲಾದರೂ ಇರು ಎಂತಾದರೂ ಇರು (ಅಖಂಡ ಕರ್ನಾಟಕ) – ಕುವೆಂಪು

ಅಥವಾ

ಬಲಿದಾನ (ನಾಟಕ)– ಕುವೆಂಪು

೭. ಕನ್ನಡ ರಾಷ್ಟ್ರೀಯತೆಯ ಸ್ವರೂಪ(ಸಾಹಿತ್ಯ ಕಥನ) – ಡಾ.ಡಿ.ಆರ್.ನಾಗರಾಜ್

೮. ಕಟ್ಟುತ್ತೇವೆ ನಾವು – ಸತೀಶ್ ಕುಲಕರ್ಣಿ

೯. ಕಟ್ಟುವೆವು ನಾವು – ಗೋಪಾಲಕೃಷ್ಣ ಅಡಿಗ

ಅಥವಾ

ನೆನೆ ನೆನೆ ಆದಿನವ(ಕವನ) – ಗೋಪಾಲ ಕೃಷ್ಣ ಅಡಿಗರು

೧೦. ರಾಷ್ಟ್ರ ರಾಜೇಶ್ವರಿಗೆ – ಸಿದ್ಧಯ್ಯ ಪುರಾಣಿಕ

ಅಥವಾ

ಸಾಲದ ಜಾಲ (ಕವಿತೆ) – ಸಿದ್ಧಯ್ಯ ಪುರಾಣಿಕ

ಅಥವಾ

ಕಲ್ಲೋಲ ಮಾಲೆ – ಸಿದ್ಧಯ್ಯ ಪುರಾಣಿಕ

ಅಥವಾ

ಒಂದು ಸೆರೆಮನೆಯಿಂದ ಇನ್ನೊಂದು ಸೆರೆಮನೆಗೆ – ಸಿದ್ಧಯ್ಯ ಪುರಾಣಿಕ

೧೧. ಹಲಗಲಿ ಬೇಡರು – ಲಾವಣಿ

೧೨. ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಸಮಾಜ ಸುಧಾರಕಿ ಶ್ರೀಮತಿ. ಯಶೋಧರಮ್ಮ ದಾಸಪ್ಪ ಅವರ ರಚನಾತ್ಮಕ ಕಾರ್ಯಗಳು – ಡಾ. ಮಹಾದೇವಿ

೧೩. ಸ್ವಾತಂತ್ರ್ಯದೆಡೆಗೆ (ಸಣ್ಣಕಥೆ) – ಬಸವರಾಜ ಕಟ್ಟೀಮನಿ.

ಅಥವಾ

ಅಜ್ಞಾತವಾಸಿ (ಕತೆ) – ಬಸವರಾಜ ಕಟ್ಟೀಮನಿ

೧೪. ನನ್ನ ದೇಶ, ನನ್ನ ಜನ – ಚನ್ನವೀರ ಕಣವಿ

ಅಥವಾ

ಜಯ ಭಾರತ ವಂದೇ – ಚನ್ನವೀರ ಕಣವಿ

ಅಥವಾ

ತಾಯೆ ನಿನ್ನ ಮಡಿಲೊಳು – ಚನ್ನವೀರ ಕಣವಿ

ಅಥವಾ

ವಿಶ್ವಭಾರತಿಗೆ ಕನ್ನಡದಾರತಿ

೧೫. ಕನಸಿನೊಳಗೊಂದು ಕಣಸು – ದ.ರಾ.ಬೇಂದ್ರೆ

ಅಥವಾ

ನಿವಾರಳಾ – ದ.ರಾ.ಬೇಂದ್ರೆ

೧೬. ಪ್ರತಿಜ್ಞೆ – ವಿ.ಕೃ.ಗೋಕಾಕ

೧೭. ನಮ್ಮ ಬಾವುಟ – ಜಿ.ಎಸ್.ಶಿವರುದ್ರಪ್ಪ

ಅಥವಾ

ಸ್ವಾತಂತ್ರ್ಯೋತ್ಸವ ೧೯೫೪ – ಜಿ.ಎಸ್.ಶಿವರುದ್ರಪ್ಪ

ಅಥವಾ

ಈ ದೇಶದಲ್ಲಿ – ಜಿ.ಎಸ್.ಶಿವರುದ್ರಪ್ಪ

೧೮. ಆವೇಶ – ಗಂಗಾಧರ ಚಿತ್ತಾಲ

ಅಥವಾ

ಬಿಡುಗಡೆ – ಗಂಗಾಧರ ಚಿತ್ತಾಲ

೧೯. ಸತ್ಯಾಗ್ರಹಿ – ವಿ.ಜಿ.ಭಟ್

೨೦. ಭರತ ಭೂಮಿ – ಸಾಲಿ ರಾಮಚಂದ್ರರಾಯ

ಅಥವಾ

ಸ್ವಾಗತಂ ಸ್ವಾತಂತ್ರ್ಯ ಭಾನು – ಸಾಲಿ ರಾಮಚಂದ್ರರಾಯ

೨೧. ಸ್ವಾತಂತ್ರ್ಯವೀರ (ಕತೆ) – ಶಾಂತರಸ

ಅಥವಾ

ನಾಯಿ ಮತ್ತು ಪಿಂಚಣಿ (ಕತೆ) – ಶಾಂತರಸ

೨೨. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು (ಕೃತಿ ಪ್ರಸ್ತಾವನಾ ಭಾಗ) – ಎನ್.ಪಿ.ನಾರಾಯಣರಾವ್

೨೩. ಭಾರತದ ಪುನರುತ್ಥಾನ – ಶ್ರೀ ಅರವಿಂದರ ವಿಚಾರಧಾರೆ (ಮೂಲ), ಕೊ. ಚನ್ನಬಸಪ್ಪ (ಅನು)

೨೪. ರಾಷ್ಟ್ರೀಯತೆ – ಕೆ.ವಿ.ತಿರುಮಲೇಶ

೨೫. ನನ್ನ ಭಾರತೀಯತೆ ಮತ್ತು ಜಾತಿಯ ಸಮಸ್ಯೆ – ಎ.ಎನ್. ಮೂರ್ತಿರಾವ್

೨೬. ಕನ್ನಡದಲ್ಲಿ ರಾಷ್ಟ್ರೀಯ ವಾಙ್ಮಯ – ಬೆಟಗೇರಿ ಕೃಷ್ಣಶರ್ಮ

೨೭. ಭಾರತದಲ್ಲಿ ರಾಷ್ಟ್ರೀಯತವಾದ – ಬಂಜಗೆರೆ ಜಯಪ್ರಕಾಶ

೨೮. ನನ್ನದು ಈ ಕನ್ನಡ ನಾಡು(ಕವನ) – ಬೆಟಗೇರಿ ಕೃಷ್ಣಶರ್ಮ

೨೯. ನಾವು ನಾಡವರು, ಕರ್ನಾಟಕದವರು(ಕವನ) – ರಂ.ಶ್ರೀ.ಮುಗಳಿ

೩೦. ಇಂದು ಜನರಿಗೆ ತಂದೆಯೆನಿಸಿಹ...(ದೇಶಭಕ್ತಿಪರ ಪದ) – ವೆಂಕಮ್ಮ(ದಾಸ ಸಾಹಿತ್ಯದವರು)

೩೧. ಸ್ವಾತಂತ್ರ್ಯ ಕಹಳೆ(ಕವನ) – ಡಾ. ಸರೋಜಿನಿ ಮಹಿಷಿ

೩೨. ಭಾರತೀಯತೆ – ಕೆ.ಎಸ್.ನರಸಿಂಹಸ್ವಾಮಿ

೩೩. ಐಕ್ಯಗಾನ – ಕಯ್ಯಾರ ಕಿಞ್ಞಣ್ಣ ರೈ

ಅಥವಾ

ನೌಶೇರ ಶೂರ – ಕಯ್ಯಾರ ಕಿಞ್ಞಣ್ಣ ರೈ

೩೪. ಕನ್ನಡಿಗರ ತಾಯಿ – ಎಂ.ಗೋವಿಂದ ಪೈ

೩೫. ನಿತ್ಯೋತ್ಸವ – ಕೆ.ಎಸ್.ನಿಸಾರ್ ಅಹಮದ್

೩೬. ಕಿತ್ತೂರು ಚೆನ್ನಮ್ಮನ ಲಾವಣಿ

೩೭. ನಂಜನಗೂಡು ತಿರುಮಲಾಂಬಾ ಕೀರ್ತನೆಗಳು

೩೮. ಇಂದಿನ ದೇವರು – ಕುವೆಂಪು

೩೯. ನಿತ್ಯೋತ್ಸವ – ಕೆ.ಎಸ್. ನಿಸಾರ್ ಅಹಮ್ಮದ್

೪೦. ಭಾರತಿ – ಚಂದ್ರಶೇಖರ ಕಂಬಾರ

೪೧. ಕನ್ನಡ ತಾಯಿಯ ಸುಪ್ರಭಾತ – ಚಂದ್ರಶೇಖರ ಕಂಬಾರ

೪೨. ಮತ್ತೆ ಪಂದರಾ ಬಂದಾಗ – ಶಶಿಕಲಾ ವೀರಯ್ಯಸ್ವಾಮಿ

**ಘಟಕ–೩.೨ : ಕೃಷಿ**

ಭಾರತ ಕೃಷಿ ಪ್ರಧಾನ ರಾಷ್ಟ್ರ. ಕೃಷಿಯನ್ನು ಕುರಿತು ಮೊದಲಿನಿಂದಲೂ ನಮ್ಮ ಜನಪದರು ತಮ್ಮ ಅನಿಸಿಕೆ ಮತ್ತು ಪೂಜ್ಯತೆಯನ್ನು ಇರಿಸಿಕೊಂಡು ಜೀವನ ನಡೆಸಿದ್ದಾರೆ. ಗ್ರಾಮೀಣ ಪರಿಸರದ ಪ್ರತಿಯೊಂದು ಆಚರಣೆ, ನಂಬಿಕೆ, ಸಂಪ್ರದಾಯ, ಕೃಷಿ ಪ್ರಧಾನವಾಗಿ ನಡೆದುಕೊಂಡು ಬಂದಿವೆ. ಮುಖ್ಯವಾಗಿ ಕನ್ನಡ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಕೃಷಿಗೆ ಸಂಬಂಧಿಸಿದ ತೆರಿಗೆ ಪದ್ಧತಿ ಹಾಗೂ

ಕೃಷಿ ಉತ್ಪಾದನಾ ವಸ್ತುಗಳ ಸಾಗಾಣಿಕೆ, ಮಾರಾಟ ಇತ್ಯಾದಿ ಸಂಗತಿಗಳು ನಿರೂಪಿತವಾಗಿವೆ. ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯ ನೆಪದಲ್ಲಿ ಭೂಮಿ ಕೃಷಿಯೇತರ ಚಟುವಟಿಕೆಗಳಿಗೆ ವಿನಿಯೋಗವಾಗುತ್ತಲಿದೆ.

ಬಹು ಸಂಸ್ಕೃತಿಯ ಭಾರತದಲ್ಲಿ ಕೃಷಿಯನ್ನು ಆಶ್ರಯಿಸಿದ ಜನ ಸಮುದಾಯದ ಬಿಕ್ಕಟ್ಟುಗಳು ಉಲ್ಬಣಗೊಳ್ಳುತ್ತಿರುವ ಈ ಹೊತ್ತಿನ ದಿನಗಳಲ್ಲಿ ನಮ್ಮ ಪ್ರಾಚೀನ ಕವಿಗಳು, ಅನುಭಾವಿಗಳು ಹಾಗೂ ಆಧುನಿಕ ಚಿಂತಕರು ರಚಿಸಿದ. ಉದಾಹರಣೆಗೆ ಒಕ್ಕಲಿಗ ಮುದ್ದಣ್ಣನ ವಚನಗಳು, ಹರಿಹರನ ಇಳೆಯಾಂಡ ಗುಡಿಮಾರನ ರಗಳೆ, ಬೇಂದ್ರೆಯವರ ಭೂಮಿ ತಾಯಿಯ ಚೊಚ್ಚಲ ಮಗ, ಘನಮಠ ಶಿವಯೋಗಿಗಳ ಕೃಷಿ ಜ್ಞಾನ ಪ್ರದೀಪಿಕೆ ಮುಂತಾದ ಕೃಷಿ ಸಂಬಂಧಿ ಕೃತಿಗಳ ಆಶಯವನ್ನು ಇಲ್ಲಿ ಪರಿಚಯಿಸುವುದು ಈ ಘಟಕದ ಉದ್ದೇಶವಾಗಿದೆ.

೧. ಕೃಷಿಗೆ ಸಂಬಂಧಿಸಿ ಆಯ್ದ ವಚನಗಳು – ಅಲ್ಲಮಪ್ರಭು, ಸರ್ವಜ್ಞ, ಒಕ್ಕಲಿಗರ ಮುದ್ದಣ ಮುಂತಾದವರ ವಚನಗಳು
೨. ಕೃಷಿಗೆ ಸಂಬಂಧಿಸಿ ಆಯ್ದ ಕೀರ್ತನೆಗಳು – ಪುರಂದರದಾಸರು, ಕನಕದಾಸ ಮುಂತಾದವರ ಕೀರ್ತನೆಗಳು
೩. ಕೃಷಿಗೆ ಸಂಬಂಧಿಸಿ ಆಯ್ದ ತತ್ವಪದಗಳು – ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ ಮುಂತಾದವರ ತತ್ವಪದಗಳು
೪. ಕೃಷಿಗೆ ಸಂಬಂಧಿಸಿ ಜನಪದ ತ್ರಿಪದಿಗಳು
೫. ಜನಪದದಲ್ಲಿ ಮಳೆ – ಪ್ರಕಾಶ ಖಾಡೆ
೬. ಇಳೆಯಾಂಡ ಗುಡಿಮಾರನ ರಗಳೆ – ಹರಿಹರ
೭. ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದ ಕೃಷಿ ಸಂಬಂಧಿ ಪದ್ಯಗಳು
೮. ಕೃಷಿಜ್ಞಾನ ಪ್ರದೀಪಿಕೆ – ಘನಮಠ ಶಿವಯೋಗಿ
೯. ಭೂಮಿತಾಯಿಯ ಚೊಚ್ಚಲ ಮಗ – ದ.ರಾ.ಬೇಂದ್ರೆ

   ಅಥವಾ

   ಅನ್ನಯಜ್ಞ – ದ.ರಾ.ಬೇಂದ್ರೆ

   ಅಥವಾ

   ಚಿಗರಿಗಂಗಳ ಚೆಲುವಿ – ದ.ರಾ.ಬೇಂದ್ರೆ

   ಅಥವಾ

   ಹರಗೋಣ ಬಾ ಹೊಲ – ದ.ರಾ. ಬೇಂದ್ರೆ

೧೦. ದೇವ ಮೂಲೆಯ ಮಳೆ – ಹನೂರು ಕೃಷ್ಣಮೂರ್ತಿ
೧೧. ಅವ್ವ – ಪಿ. ಲಂಕೇಶ
೧೨. ನೇಗಿಲಯೋಗಿ – ಕುವೆಂಪು

   ಅಥವಾ

   ರೈತನ ದೃಷ್ಟಿ – ಕುವೆಂಪು

   ಅಥವಾ

   ಹೀರೆಯ ಹೂವು – ಕುವೆಂಪು

ಅಥವಾ

ಗೊಬ್ಬರ – ಕುವೆಂಪು

ಅಥವಾ

ಧನ್ವಂತರೀ ಚಿಕಿತ್ಸೆ – ಕುವೆಂಪು

೧೩. ಕರೇಬಳಗ – ಎಸ್.ಜಿ.ಸಿದ್ಧರಾಮಯ್ಯ

೧೪. ಕೃಷಿ ಗ್ರಾಮೀಣ ಸಮಾಜ ಮತ್ತು ಮಹಿಳೆ – ಕೆ.ಜಿ. ಗಾಯತ್ರಿದೇವಿ

೧೫. ಆಹಾರ – ಫಿಲಿಪ್ ಮ್ಯಾಕ್ ಮೈಕಲ್(ಮೂಲ), ಷಾ ರಘುನಂದನ್(ಅನು)

೧೬. ಭೂಮಿ ಮತ್ತು ಬೀಜ – ವಂದನಾ ಶಿವಾ

೧೭. ಮೈಸೂರಿನಲ್ಲಿ ತೋಟಗಾರಿಕೆ ಮತ್ತು ರಾಬರ್ಟ್ ಇಲಿಯಟ್ – ರವಿರಾಜ ಬಿ.ವಿ.(ಇತಿಹಾಸ ದರ್ಶನ ಸಂ.–೩೦)

ಅಥವಾ

ವಸಹಾತುಶಾಹಿ ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಬಂಡವಾಳಶಾಹಿ ತೋಟಗಾರಿಕಾ ಬೆಳವಣಿಗೆ – ರವಿರಾಜ ಬಿ.ವಿ. (ಇತಿಹಾಸ ದರ್ಶನ ಸಂ.–೩೦)

೧೮. ಬೆಟ್ಟದಿಂದ ಬಟ್ಟಲಿಗೆ – ಎಚ್.ಎಲ್.ನಾಗೇಗೌಡ

೧೯. ಡೆಂಟಲ್ ಪ್ರಸ್ತಾವನೆ – ಎಂ.ಪಿ.ಪ್ರಕಾಶ

೨೦. ಜನಪದ ಸಾಹಿತ್ಯದಲ್ಲಿ ಕೃಷಿ – ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು

೨೧. ತೋಟದಿಂದ ತಟ್ಟೆಗೆ – ನಾಗೇಶ ಹೆಗಡೆ

೨೨. ಒಂದು ಹುಲ್ಲಿನ ಕ್ರಾಂತಿ – ಫುಕುವೊಕಾ(ಮೂಲ), ಸಂತೋಷ ಕವಲಗಿ(ಅನು)

೨೩. ಶೂನ್ಯ ಬಂಡವಾಳ – ಆನಂದಕಂದ

೨೪. ತುಗುಚೆ ಸೊಪ್ಪಿನ ಚಿಕಿತ್ಸೆ –ಪೂರ್ಣಚಂದ್ರ ತೇಜಸ್ವಿ

ಅಥವಾ

ಸಹಜ ಕೃಷಿ – ಪೂರ್ಣಚಂದ್ರ ತೇಜಸ್ವಿ

೨೫. ಪ್ರಕೃತಿಯೊಂದಿಗಿನ ಅನುಸಂಧಾನ – ನಾ. ಡಿಸೋಜ

೨೬. ಕಪ್ಪೆ ಶಾರದೆಯ ಮೇಳ – ಎಚ್. ನಾಗವೇಣಿ

೨೭. ಕೆರೆಗಳಿಗೆ ಕಾಯಕಲ್ಪ – ಚಂದ್ರಶೇಖರ ನಂಗಲಿ

೨೮. ಅಡಕೆಯ ಮಾನ(ಲೇಖನ) – ಕೆ.ವಿ. ಸುಬ್ಬಣ್ಣ

೨೯. ಒಕ್ಕಲಿಗರ ಮುದ್ದೇಗೌಡ – ಡಾ. ಪಿ.ಕೆ. ರಾಜಶೇಖರ(ಸಂ)

೩೦. ಭೀಮಣ್ಣ ಮುದ್ದೇಗೌಡರ ದರಕಾಸ್ ಭೂಮಿಲಿ ಗೇದಪರ್ವ ಭೀಮಣ್ಣ ಕೂಲಿ ಕೆಲಸಕ್ಕೆ ಹೋಗಿದ್ದು – ಡಾ.ಪಿ.ಕೆ.ರಾಜಶೇಖರ(ಸಂ)

೩೧. ಬೇಸಾಯದಲಿ ಬದುಕುಳಿಯಲು – ದೇವನೂರ ಮಹಾದೇವ

೩೨. ರೈತನೊಬ್ಬನ ಕ್ರಾಂತಿ ಹುಲ್ಲುಕಡ್ಡಿಯ ಪವಾಡ – ಪಿ. ಲಂಕೇಶ

೩೩. ಮಳೆಯಾಧಾರಿತ ಕೃಷಿ ಬಿಕ್ಕಟ್ಟು ಉಳಿವಿನ ಕೀಲಿಕೈ ಮಹಿಳೆಯ ಕೈಯಲ್ಲಿ – ವಿ.ಗಾಯಿತ್ರಿ

೩೪. ಶೂನ್ಯ ಬಂಡವಾಳದ ಕೃಷಿ – ಆನಂದತೀರ್ಥ ಪ್ಯಾಟಿ

೩೫. ಶ್ರೀಪಡ್ರೆ ಮತ್ತು ಶಿವಾನಂದ ಕಳವೆರವರ ಕೃಷಿ ಸಂಬಂಧಿತ ಆಯ್ದ ಲೇಖನಗಳು

೩೬. ಹಸಿರು ಹೊನ್ನು (ಆಯ್ದ ಭಾಗ) – ಬಿ.ಜಿ.ಎಲ್.ಸ್ವಾಮಿ

೩೭. ಚಲುವನ ಪರಂಗಿ ಗಿಡಗಳು – ಬೆಸಗರಹಳ್ಳಿ ರಾಮಣ್ಣ

ಅಥವಾ

ಸುಗ್ಗಿ – ಬೆಸಗರಹಳ್ಳಿ ರಾಮಣ್ಣ

೩೮. ಕರಿಮಣ್ಣಿನ ಗೊಂಬೆಗಳು – ಕರೀಗೌಡ ಬೀಚನಹಳ್ಳಿ

ಅಥವಾ

ಕಡಲ ಮಂತು – ಕರೀಗೌಡ ಬೀಚನಹಳ್ಳಿ

**ಘಟಕ–೩.೩ : ಕ್ರೀಡೆ**

ಪ್ರತಿಯೊಂದು ಜೀವಿಯೂ ತನ್ನ ಜೀವನದಲ್ಲಿ ಕ್ರೀಡೆಯ ಬಗ್ಗೆ ತನ್ನ ಮಿತಿಯಲ್ಲಿ ಆಸಕ್ತಿ, ಅಭಿರುಚಿಯನ್ನು ಹೊಂದಿರುತ್ತದೆ. ಅದರಲ್ಲಿಯೂ ಬಾಲ್ಯಾವಸ್ಥೆಯಲ್ಲಿ ಆಟವಾಡದೆ ಇರುವ ಜೀವಿಗಳು ಇಲ್ಲವೇ ಇಲ್ಲವೆನ್ನಬಹುದು. ಮಾನವರೊಂದಿಗೆ ಪಶು, ಪಕ್ಷಿ, ಪ್ರಾಣಿಗಳೂ ಇದರಿಂದ ಹೊರತೇನಲ್ಲ. ಮಾನವರಂತೂ ತಮ್ಮ ತಮ್ಮ ಬಾಲ್ಯಾವಸ್ಥೆಯಲ್ಲಿ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗುವುದರ ಮೂಲಕ ಆ ವಯೋಮಾನವನ್ನು ಅತ್ಯಂತ ಸಂತಸ, ಸಂಭ್ರಮದಿಂದ ಕಳೆಯುವುದನ್ನು ಕಾಣುತ್ತಿದ್ದೇವೆ. ಈ ಕ್ರೀಡಾ ಮನೋಭಾವವು ನಮ್ಮನ್ನು ನಿರಂತರವಾಗಿ ಚೈತನ್ಯಶೀಲಗೊಳಿಸುವ ಹವ್ಯಾಸವಾಗಿದೆ.

ದೈಹಿಕವಾದ ಮತ್ತು ಮಾನಸಿಕವಾದ ಆರೋಗ್ಯದ ಹಿತದೃಷ್ಟಿಯಿಂದ ಕ್ರೀಡೆ ಅತ್ಯಗತ್ಯ. ಮಾನವ ಲೋಕದಲ್ಲಿ ಕ್ರೀಡೆ ಮತ್ತು ಕ್ರೀಡಾ ಸ್ಪರ್ಧೆ, ಆಟೋಟಗಳು ಆದಿಮಾನವನ ಕಾಲದಿಂದ ನಡೆದುಬಂದಿದೆ. ದ್ಯೂತ, ಕುಸ್ತಿ, ಶಸ್ತ್ರಗಳ ಕಾದಾಟ ಮೊದಲಾದ ವೀರೋಚಿತ ಕ್ರೀಡಾ ಸ್ಪರ್ಧೆಗಳು ಆಯಾ ಜನಜೀವನದ ವೀರ ಮೌಲ್ಯವಾಗಿ ಖ್ಯಾತಿ ಪಡೆದಿದ್ದ ಉಲ್ಲೇಖಗಳು ಸಾವರಾರು ನಮ್ಮ ಮುಂದಿವೆ.

ನಾಗರೀಕತೆ ವಿಕಾಸಗೊಂಡಂತೆ ಕ್ರೀಡೆ ದೈಹಿಕ ಕಸರತ್ತಿನ, ಮಾನಸಿಕ ವಿಕಾಸದ, ಖುಷಿಯ ಪ್ರಕಾರವಾಗಿ ಲೋಕ ವಿಖ್ಯಾತಿ ಪಡೆದಿದೆ. ಆಧುನಿಕ ಜಗತ್ತಿನಲ್ಲಿ ಕ್ರೀಡೆ ಕೋಟ್ಯಾಂತರ ರೂಪಾಯಿಗಳ ವಹಿವಾಟು, ವ್ಯಾಪಾರಿ ಸರಕಾಗಿ, ಅಸಂಖ್ಯಾತ ಜನರ ಬದುಕಿನ ಆಸರೆ, ಅವಲಂಬನೆ, ಉದ್ಯಮ ಹೀಗೆ ಹಲವು ವಿಭಿನ್ನ ನೆಲೆಯಲ್ಲಿ ವಿಸ್ತರಿಸಿ ಜಗತ್ತನ್ನು ಆವರಿಸಿಕೊಂಡಿರುವ ಹವ್ಯಾಸದ ಭಾಗವಾಗಿದೆ. ಹೀಗೆ ಕ್ರೀಡೆಯನ್ನು ಕೇಂದ್ರೀಕರಿಸಿರುವ ಸಾಹಿತ್ಯ ಭಾಗವನ್ನು ಪಠ್ಯವಾಗಿಸುವುದರ ಮೂಲಕ ಕ್ರೀಡಾ ಜಗತ್ತಿನ ಬಗೆಗೆ ವಿದ್ಯಾರ್ಥಿಗಳಲ್ಲಿರುವ ಸಹಜ ಆಸಕ್ತಿಯನ್ನು ಉತ್ತೇಜಿಸಬಹುದಾಗಿದೆ.

೧. ನೆತ್ತಮನಾಡಿ ಭಾನುಮತಿ ಸೋಲ್ತಡೆ – ಪಂಪನ ವಿಕ್ರಮಾರ್ಜುನ ವಿಜಯ

೨. ರಾಮನಾಥ ಚರಿತೆಯ ಮುತ್ತಿನ ಚೆಡ್ಡಾಟದ ಪ್ರಸಂಗ – ಎಚ್.ದೇವೀರಪ್ಪ

೩. ವಡ್ಡಾರಾಧನೆ ವಿದ್ದುಚ್ಚೋರಋಷಿಯ ಕಥೆ – ಶಿವಕೋಟಾ ಚಾರ್ಯ

೪. ಕುಮಾರವ್ಯಾಸ ಭಾರತದ ಸಭಾ ಪರ್ವದ ದ್ಯೂತ ಪ್ರಸಂಗ

೫. ಭರತೇಶ ವೈಭವದ ಆಯ್ದ ಭಾಗಗಳು

೬. ಕಾಳಿಂಗ ಕ್ರೀಡೆ – ಪು.ತಿ.ನ.

೭. ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗತಿ ಕೋಳಿ ಅಂಕದ ಪ್ರಸಂಗ

೮. ಜನಪದ ವಿಷಯ ವಿಶ್ವಕೋಶದ ಆಯ್ದ ಜನಪದ ಕ್ರೀಡೆಗಳು – ಚಂದ್ರಶೇಖರ ಕಂಬಾರ(ಸಂ)

೯. ಜನಪದ ಕ್ರೀಡೆಗಳು – ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಕರ್ನಾಟಕ ಜನಪದ ಕಲೆಗಳ ಕೋಶ – ಹಿ.ಚಿ.ಬೋರಲಿಂಗಯ್ಯ(ಸಂ)

೧೧. ಫುಡ್‌ಬಾಲ್ ಆಟಗಾರ – ಪಿ.ಲಂಕೇಶ

೧೨. ಓಲಂಪಿಕ್ ಆಟಗಳು – ರಾಮಮನೋಹರ್ ಲೋಹಿಯಾ(ಮೂಲ), ನಟರಾಜ ಹುಳಿಯಾರ್(ಸಂ)

೧೩. ಕುಂಟೋಬಿಲ್ಲೆ – ಎ.ಕೆ.ರಾಮಾನುಜನ್

೧೪. ಚದುರಂಗದಾಟ – ಪ್ರೇಮ್‌ಚಂದ್(ಮೂಲ), ಷಾ ಬಾಲುರಾವ್(ಅನು)

೧೫. ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು – ಎಲ್.ಆರ್.ನಾಯಕ, ಶ್ರೀಮತಿ.ಶಾಂತಾ ನಾಯಕ(ಸಂ)

೧೬. ಮಹಿಳಾ ಜನಪದ ಕ್ರೀಡೆಗಳು

೧೭. ಕಂಬಳ – ಡಾ.ಶಿವರಾಮ ಕಾರಂತ

೧೮. ಕ್ರೀಡಾಪಟುಗಳ ಜೀವನ ಚರಿತ್ರೆ ಅಥವಾ ಆತ್ಮ ಚರಿತ್ರೆಯ ಆಯ್ದ ಭಾಗ

೧೯. ಮೊದಲ ದಲಿತ ಕ್ರಿಕೆಟರ್ ಕೆ. ಬಾಲು – ಗಿರೀಶ ದೊಡ್ಡಮನಿ

೨೦. ಕರಡಿ ಕುಣಿತ – ದ.ರಾ.ಬೇಂದ್ರೆ

**ಘಟಕ–೩.೪ : ಸಂಕೀರ್ಣ**

- ಈ ಭಾಗದಲ್ಲಿ ಕಲೆ ಮತ್ತು ಸಾಹಿತ್ಯ, ಕಲೆ ಮತ್ತು ಮನೋವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸಬೇಕು.
- ಕಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪಠ್ಯದಲ್ಲಿಲ್ಲದ ವಿಷಯಗಳನ್ನು ತಿಳಿಸಬೇಕು.
- ಇದಕ್ಕೆ ಸಂಬಂಧಿಸಿದ ವಿಶೇಷ ಪಠ್ಯಗಳನ್ನು ಆಧರಿಸಿದಂತೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕು.

೧. ಮೋಕ್ಷ ಹುಡುಕುತ್ತಾ ಪ್ರೀತಿ ಬಂಧನದಲ್ಲಿ – ಪಿ.ಲಂಕೇಶ

೨. ಇಡ್ಲಿಯ ಇತಿಹಾಸ (ವಿಚಾರ ಪ್ರಪಂಚ) – ಸೇಡಿಯಾಪು ಕೃಷ್ಣಭಟ್ಟ

೩. ಸಹಕಾರದಲ್ಲಿ ಒಂದು ಪ್ರಯೋಗ – ಜಿ.ಟಿ.ನಾರಾಯಣರಾವ್

೪. ಲೋಗರ ಸೃಷ್ಟಿ, ಲೋಕ ದೃಷ್ಟಿ – ಬಿ ಎ ವಿವೇಕ್ ರೈ

೫. ಮಹಿಷ ಪುರಾಣ – ಪಾ.ವೆಂ. ಆಚಾರ್ಯ

೬. ಭೂತಾರಾಧನೆಯಲ್ಲಿ ನ್ಯಾಯ ವ್ಯವಸ್ಥೆ – ಅಮೃತ ಸೋಮೇಶ್ವರ

೭. ಸಂಸ್ಕೃತಿ – ಡಿ.ವಿ.ಜಿ

೮. ನೋಡಬೇಕು ಹುಲಿ ಹಂದಿಯ ಹೋರಾಟ – ಕೆಡಂಬಾಡಿ ಜತ್ತಪ್ಪ ರೈ

೯. ಬಿದಿರಿ ಮನೆ – ಶಿವ ವಿಶ್ವನಾಥನ್

೧೦. ವಿಜ್ಞಾನ ಬರೆವಣಿಗೆ – ಡಾ. ಎ. ಪಿ. ಭಟ್

೧೧. ದೋಸೆ ಮತ್ತು ವಿಜ್ಞಾನ – ಬಿ.ಆರ್. ಲಕ್ಷ್ಮಣರಾವ್

೧೨. ಮಹಿಳೆ ಸಂಕೋಲೆ ಹಿಡಿತದಲ್ಲಿ – ಎನ್. ಗಾಯತ್ರಿ

೧೩. ತಾಯಿ ಪಾಠ – ಮಾಲತಿ ಪಟ್ಟಣಶೆಟ್ಟಿ

೧೪. ಮಹಿಳೆ ಆ ಅಸ್ತಿ ಹಕ್ಕು – ಸಿ ಜಿ ಮಂಜುಳಾ

೧೫. ಮೇರಿಕ್ಯೂರಿ – ನೇಮಿಚಂದ್ರ

೧೬. ಕೃತಕ ಬುದ್ಧಿವಂತಿಕೆ : ಭವಿಷ್ಯ  ತಂತ್ರಜ್ಞಾನದ ಹೆಬ್ಬಾಗಿಲು – ರೋಹಿತ್ ಬೆಂಗಳೂರು

೧೭. ಲೋಹಿಯಾ ಕಂಡ ಗಾಂಧಿ – ಬಿ.ಎ.ಸನದಿ

೧೮. ವಿಕಿಪೀಡಿಯಾ ಎಂದರೇನು? – ಯು.ಬಿ.ಪವನಜ

೧೯. ಯಾಹೋ – ಜೀಯಾವುದ್ದೀನ್ ಸರ್ದಾರ್(ಮೂಲ), ಜಶವಂತ ಜಾದವ (ಅನು)

೨೦. ಜೈಲು – ಬ್ಯಾರಸ್ ಸ್ಯಾಂಡರ್ಸ್ (ಮೂಲ), ಜಿ.ರಾಜಶೇಖರ (ಅನು)

೨೧. ಕೋಕಾ ಕೋಲಾ – ಆಶಿಶ್ ನಂದಿ

# ಬಿ. ಎಸ್ಸಿ. ೩ನೇ ಸೆಮಿಸ್ಟರ್

| **Course Title : ಬಿ. ಎಸ್ಸಿ. – ಕನ್ನಡ ಭಾಷಾ ಪಠ್ಯ :** | |
|---|---|
| Total Contact Hours : 52 to 56 | Course Credits : 03 |
| Formative Assessment Marks : 40 (CIE) | Duration of ESA / Exam : 2 hours |
| Model Syllabus Authors : Multiple Authors | Summative Assessment Marks : 60 (SEE) |

**ಕೋರ್ಸ್‌ಗಳ ವಿವರಗಳು :**

| ವಿವರಗಳು | ಬೋಧನಾ ಅವಧಿ |
|---|---|
| **ಘಟಕ–೩.೧ :** ಮಾನವೀಯತೆ | 13/14 |
| **ಘಟಕ–೩.೨ :** ಪ್ರವಾಸ | 13/14 |
| **ಘಟಕ–೩.೩ :** ವಿಚಾರ ಕ್ರಾಂತಿ | 13/14 |
| **ಘಟಕ–೩.೪ :** ಸಂಕೀರ್ಣ | 13/14 |

**ಘಟಕ–೩.೧ : ಮಾನವೀಯತೆ**

ಕನ್ನಡ ಸಾಹಿತ್ಯ ಚರಿತ್ರೆಯೆಂದರೆ ಮನುಷ್ಯ ಸಂಬಂಧದ ಹಲವು ಮುಖಗಳ ಅನಾವರಣ. ಇಲ್ಲಿ ರಾಜನೀತಿ, ಯುದ್ಧನೀತಿ, ಸಾಮಾಜಿಕ ಚಿತ್ರಣಗಳಂತೆ ಮನುಷ್ಯ ಸಂಬಂಧವನ್ನು ಬೆಸೆಯುವ ಮಾನವೀಯತೆಯ ಅಂಶಗಳನ್ನು ಕಾಣುತ್ತೇವೆ. ಮನುಷ್ಯ ಕುಲಂ ತಾನೊಂದೇ ಎಂದು ಹೇಳಿದ ಪಂಪನಿಂದ ಹಿಡಿದು ದಯವೇ ಧರ್ಮದ ಮೂಲವಯ್ಯಾ, ಮಾನವ ಜನ್ಮ ದೊಡ್ಡದು ಇದನ್ನು ಹಾಳುಮಾಡಿಕೊಳ್ಳಲು ಬೇಡಿರಿ ಎಂಬ ಶರಣರ–ದಾಸರ ಮಾನವೀಯ ತತ್ವಗಳು, ಕುವೆಂಪು ಅವರ ವಿಶ್ವಮಾನವ ಸಂದೇಶ, ಇಲ್ಲೆಲ್ಲ ದಯೆ, ಧರ್ಮ, ಶೀಲ, ತಪ, ಸತ್ಯ, ಅಹಿಂಸೆ, ಸಮುದಾಯ ಪ್ರಜ್ಞೆ, ಅಂತಃಕರಣ, ಮುಂತಾದ ಸ್ವರೂಪದಲ್ಲಿ ಮಾನವೀಯತೆ ಒಂದು ಗುಣವಾಗಿ, ತತ್ವವಾಗಿ, ಸಿದ್ಧಾಂತವಾಗಿ, ಬದುಕಿನ ಆಶಯವಾಗಿ ಪರಿಭಾವಿಸಿದ ಪರಿಣಾಮದಿಂದ ಕನ್ನಡ ಕಾವ್ಯ, ಕಥೆ, ಕಾದಂಬರಿ, ನಾಟಕ ಇತ್ಯಾದಿ ಪ್ರಕಾರಗಳಲ್ಲಿ ಮಾನವೀಯತೆಯ ಸಂವೇದನೆಗಳನ್ನು ಕಾಣುತ್ತೇವೆ. ಇಂಥ ಸಂವೇದನೆಗಳನ್ನು ನಿರೂಪಿಸುವ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಕನ್ನಡ ಪ್ರಾತಿನಿಧಿಕ ಕಾವ್ಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಂಡು ವಿದ್ಯಾರ್ಥಿಗಳಲ್ಲಿ ಮಾನವೀಯ ಗುಣಗಳನ್ನು ವಿಕಾಸಗೊಳಿಸುವ ಉದ್ದೇಶವನ್ನು ಈ ಘಟಕ ಇರಿಸಿಕೊಂಡಿದೆ.

೧. ಕಸವರಮೆಂಬುದು ನೆರೆ ಸೈರಿಸಲಾರ್ಪಡೆ ಪರವಿಚಾರಮುಮಂ – ಕವಿರಾಜಮಾರ್ಗ

೨. ಕೆರೆಯಂಕಟ್ಟಿಸು ಭಾವಿಯಂ ಸವೆಸು ದೇವಾಗಾರಮಂ ನಿರ್ಮಿಸು.....ಲಕ್ಷ್ಮೀಧರಾಮತ್ಯನ ಹಂಪಿಯಶಾಸನ

೩. ಶಿವಭೂತಿಯ ಕಥೆ – ದುರ್ಗಸಿಂಹ (ಆಕರ : ಪಂಚತಂತ್ರ)

೪. ಚಂದ್ರಹಾಸನ ಪ್ರಸಂಗ – ಲಕ್ಷ್ಮೀಶನ ಜೈಮಿನಿ ಭಾರತ

೫. ಶರಣರ ಆಯ್ದ ವಚನಗಳು – (ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ..., ಏನಿ ಬಂದಿರಿ ಹುದುಳವಿದ್ದಿರೆ..., ದಯವಿಲ್ಲದ ಧರ್ಮ ಆದಾವುದಯ್ಯಾ....., ಕಲ್ಲನಾಗರ ಕಂಡರೆ

ಹಾಲನೆರೆಯೆಂಬರು...., ಜಾಲಗಾರನೊಬ್ಬ ಜಲವ ಶೋಧಿಸಿ, ಜಾತಿವಿಡಿದು ಸೂತಕನರಸುವೆ, ನೆಲನೊಂದೆ ಹೊಲಗೇರಿ ಶೀವಾಲಯಕೆ, ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ ಇತ್ಯಾದಿ)

೬. ಹರಿದಾಸರ ಆಯ್ದ ಕೀರ್ತನೆಗಳು (ಮಾನವ ಜನ್ಮ ದೊಡ್ಡದು.... ಇತ್ಯಾದಿ – ಕನಕದಾಸರು)

೭. ತತ್ವಪದಕಾರರ ಆಯ್ದ ತತ್ವಪದಗಳು (ಶಿಶುನಾಳ ಷರೀಫ, ನಿಜಗುಣ ಶಿವಯೋಗಿ ಇತ್ಯಾದಿ)

೮. ರೊಟ್ಟಿ – (ಕತೆ) ಪಿ. ಲಂಕೇಶ

೯. ಬಿದ್ದಾವು ಮನೆಗಳು (ಕವಿತೆ) – ಡಾ. ಸಿದ್ಧಲಿಂಗಯ್ಯ.

೧೦. ಕಿವುಡ ನಾಯಿಯಾದ ಪ್ರಸಂಗ (ಕತೆ) – ಕುಂ.ವೀರಭದ್ರಪ್ಪ
ಅಥವಾ
ದೇವರ ಹೆಣ – ಕುಂ. ವೀರಭದ್ರಪ್ಪ

೧೧. ರಾಮನ್ ಸತ್ತಸುದ್ದಿ (ಕವಿತೆ) – ಕೆ.ಎಸ್.ನಿಸಾರ್ ಅಹ್ಮದ್

೧೨. ಯಾರೂ ಅರಿಯದ ವೀರ – ಕುವೆಂಪು
ಅಥವಾ
ಯಾರು ಅರಿಯದ ವೀರ – ಕುವೆಂಪು

೧೩. ನನ್ನ ನಾಯಿ (ಕವಿತೆ) – ಪು.ತಿ.ನ
ಅಥವಾ
ಪತಿಥ ಪಾವನ – ಪು.ತಿ.ನ

೧೪. ಇದ್ದತ್ – ಬೋಳವಾರು ಮಹ್ಮದ್ ಕುಞ್ಞ

೧೫. ಕೊನೆಯ ಗಿರಾಕಿ – ನಿರಂಜನ

೧೬. ಪತಿತೆ (ಕತೆ) – ಅನಕೃ

೧೭. ಚಪ್ಪಲಿಗಳು – ಸಾರಾ ಅಬೂಬಕ್ಕರ್

೧೮. ಮಾನವೀಯತೆ – ರಂಜಾನ್‌ದರ್ಗಾ

೧೯. ಬುದ್ಧಶಾಸನ – (ಹಕ್ಕಿಯ ಭೇಟಿ ಕುರಿತಾದ ಭಾಗ) ವಿಜಯಾದಬ್ಬೆ ಅವರ ಕವಿತೆ

೨೦. ತಿರುಕೊಳವಿನಾಚಿಯ ಪ್ರಸಂಗ : (ರಾಜಶೇಖರ ವಿಳಾಸದ ಭಾಗ)

೨೧. ಅಮೃತಬಳ್ಳಿ ಕಷಾಯ – ಜಯಂತ ಕಾಯ್ಕಿಣಿ

೨೨. ನಾಲ್ಕು ಮೊಳ ಭೂಮಿ – ಚದುರಂಗ

೨೩. ಕಪ್ಪು ಹುಡುಗನ ಹಾಡು – ಅಬ್ದುಲ್ ರಶೀದ್

೨೪. ಕೇರಿ ಮರೆತ ಊರಿಗೆ – ಈರಣ್ಣ ಮಡಿವಾಳರ

೨೫. ಅಪ್ಪ – ಸತ್ಯಾನಂದ ಪಾತ್ರೋಟ

೨೬. ಮಾನವೀಯತೆಯ ನಿಧಿ ಗಾಂಧೀಜಿ – ದೇಜಗೌ

೨೭. ಸುಸ್ಮಿತ ಮತ್ತು ಹಕ್ಕಿಮರಿ(ಕತೆ) – ಪೂರ್ಣಚಂದ್ರ ತೇಜಸ್ವಿ
ಅಥವಾ
ಕುಕ್ಕುಟ ಪಿಶಾಚಿ(ಕತೆ) – ಪೂರ್ಣಚಂದ್ರ ತೇಜಸ್ವಿ

೨೮. ಒಡಲ ತವಕ – ಡಾ. ಕರೀಗೌಡ ಬೀಚನಹಳ್ಳಿ
ಅಥವಾ
ದನಿ – ಡಾ. ಕರೀಗೌಡ ಬೀಚನಹಳ್ಳಿ

೨೯. ಮುದುಕ ಹೇಳಿದ ಕತೆ – ಮ್ಯಾಕ್ಸಿಂ ಗೋಕಿ, ಕೆ.ವಿ. ಸುಬ್ಬಣ್ಣ (ಅನು)

೩೦. ನೆಲ್ಸನ್ ಮಂಡೇಲಾ – ರಂಜಾನ್ ದರ್ಗಾ

೩೧. ಮಿರ್ಜಾರ ಮಾನವೀಯತೆ – ಡಿ.ವಿ.ಜಿ

೩೨. ಒಂದಿಷ್ಟು ಹಸಿ ಮಣ್ಣು – ರೂಪಾ ಹಾಸನ

೩೩. ಕರಿ ತೆಲಿ ಮಾನವನ ಜೀಪದ (ಕವಿತೆ) – ಡಾ. ಚೆನ್ನಣ್ಣ ವಾಲೀಕಾರ

ಅಥವಾ

ನೀಹೋದ ಮರುದಿನ... (ಕವಿತೆ) – ಡಾ. ಚೆನ್ನಣ್ಣ ವಾಲೀಕಾರ

೩೪. ದೇವದಾಸಿ – ಸುಕನ್ಯಾ ಮಾರುತಿ

೩೫. ಕಂದೀಲು (ಕವಿತೆ) – ಶಿವಶರಣ ಪಾಟೀಲ ಜಾವಳಿ

೩೬. ಈ ಮಣ್ಣು ಅಪ್ಪಿಕೊಳ್ಳುವ ಮುನ್ನ (ಕವಿತೆ) – ಗವಿಸಿದ್ದ ಎನ್ ಬಳ್ಳಾರಿ

೩೭. ಹಂಗಿನರಮನೆಯ ಹೊರಗೆ (ಕಥೆ) – ರಾಜಶೇಖರ ನೀರಯಾನ್ವಿ

೩೮. ಉಡಿವೊಳಗಿನ ಉರಿ (ಕಥೆ) – ಶಾಂತರಸ ಹೆಂಬೇರಾಳು

೩೯. ಕಾಗೆ (ಕಥೆ) – ಚಿದಾನಂದ ಸಾಲಿ

೪೦. ಬುದ್ಧ ಗಂಟೆಯ ಸದ್ದು (ಕಥೆ) – ಮಹಾಂತೇಶ್ ನವಲಕಲ್

೪೧. ಚಿತ್ತಿ ಮತ್ತು ರಿಕ್ಷಾ (ಕಥೆ) – ಡಾ. ಗೀತಾ ನಾಗಭೂಷಣ

೪೨. ಹೆತ್ತವ್ವನ ಹಾಡು (ಕವಿತೆ) – ಡಾ. ಬಸವರಾಜ ಸಬರದ

೪೩. ಅವ್ವ ನೀ ಸಾಯಬಾರದಿತ್ತು (ಕಥೆ) – ಪಾರ್ವತಿ ಸೋನಾರೆ

**ಘಟಕ–೩.೨ : ಪ್ರವಾಸ**

